# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:208 • ನೋಂದಣಿ ಸಂ.:KARKAN27911 • ವಿಜಯನಗರ • 12.01.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:208 • Reg.No:KARKAN27911 • VIJAYANAGARA • 12.01.2024 • Friday • Page:04 • Rs:2










**ಮೈಕ್ರೋ ನ್ಯೂಸ್**

## ಹಂಪಿ ಉತ್ಸವ: ಆಹಾರ ಪೂರೈಸಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯಲ್ಲಿ ಫೆ. 2ರಿಂದ 3 ದಿನಗಳ ಕಾಲ ನಡೆಯುವ ಹಂಪಿ ಉತ್ಸವಕ್ಕೆ ಆಗಮಿಸುವ ಪ್ರವಾಸಿಗರು, ಸಾರ್ವಜನಿಕರಿಗೆ ರುಚಿ ಶುಚಿಯಾದ ಪ್ರಾದೇಶಿಕ ಉಪಹಾರ, ಊಟ ಮತ್ತು ಇತರೆ ಗುಣಮಟ್ಟದ ಆಹಾರವನ್ನು ಮಿತ ಶುಲ್ಕದೊಂದಿಗೆ ಪೂರೈಸಲು ಆಸಕ್ತ ಹೋಟೆಲ್ ಮಾಲೀಕರಿಗೆ ಅರ್ಜಿ ಆಹ್ವಾನಿಸಲಾಗಿರುತ್ತದೆ.

ಅರ್ಜಿಯನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ರಾಜೀವ್ ನಗರ, 15ನೇ ವಾರ್ಡ್‌ರಾಜೀವ್ ಪಾರ್ಕ್ ಹತ್ತಿರ, ಹೊಸಪೇಟೆ ಇವರಲ್ಲಿ ಅರ್ಜಿಯನ್ನು ಪಡೆದು, ನಿಗದಿತ ನೊಂದಣಿ ಶುಲ್ಕವನ್ನು ಪಾವತಿಸಿ ಜನವರಿ 20ರ ಸಂಜೆ 5 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9972451535 ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಹಂಪಿ ಉತ್ಸವ ಆಹಾರ ಮೇಳ ವಿಭಾಗದ ನೋಡಲ್ ಅಧಿಕಾರಿ ಶಾಪ ಮೋದಿನ್ ತಿಳಿಸಿದ್ದಾರೆ.

## ವಿದ್ಯಾರ್ಥಿ ವೇತನ, ವಸತಿ ಸಹಾಯ ಯೋಜನೆ: ಅರ್ಜಿ ಸಲ್ಲಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆ ಅಲೆಮಾರಿ ಪ್ರವರ್ಗ-1ರ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅವಧಿಯನ್ನು ಜನವರಿ 15ರವರೆಗೆ ವಿಸ್ತರಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಇಲಾಖಾ ವೆಬ್‌ಸೈಟ್ https://ssp.postmatric.karnataka.gov.in ಮೂಲಕ ಜ.15ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.






**ಒಳ ಪುಟಗಳಲ್ಲಿ**


**ಭಾರತದ ಆಧ್ಯಾತ್ಮಿಕತೆಯ ಶಿಖರ... ಸ್ವಾಮಿ ವಿವೇಕಾನಂದ**
– ವೀಣಾ ಹೇಮಂತಗೌಡ ಪಾಟೀಲ್,
ಪುಟ 2 ರಲ್ಲಿ ಓದಿ

**ನಮ್ಮ ಓನರ್ ಬಡವ !**
– ರಹಮತ್ ತರೀಕೆರೆ
ಪುಟ 3 ರಲ್ಲಿ ಓದಿ


# ಸುಳ್ಳು ಹೇಳಿ ಸತ್ಯವನ್ನು ಮುಚ್ಚಿಡಲಾಗದು

**ನಾಡೋಜ ಶ್ರೀ ಬಸವ ಪಟ್ಟದ್ದೇವರ ಹೇಳಿಕೆ | ಲಿಂಗಾಯತರಿಗೆ ಇಷ್ಟಲಿಂಗದಿಂದಲೇ ಅಸ್ತಿತ್ವ | ಇಷ್ಟಲಿಂಗ ಯೋಗದಿಂದ ಆಧ್ಯಾತ್ಮಿಕ ಸಬಲೀಕರಣ**

**ಹಂಪಿ ಟೈಮ್ಸ್ ಹೊಸಪೇಟೆ**



ಲಿಂಗಾಯತ ಸಮಾಜಕ್ಕೆ ಇಷ್ಟಲಿಂಗ ಗುರುತಿನ ಚೀಟಿ ಮಾತ್ರವಲ್ಲ ಅದು ಪ್ರತಿಯೊಬ್ಬರ ಸಬಲೀಕರಣದ ಮಹಾದ್ವಾರ. ಸುಳ್ಳನ್ನ ಸಾವಿರ ಸಲ ಹೇಳಿ ಸತ್ಯವನ್ನ ಎಂದೆಗೂ ಮುಚ್ಚಿಡಲಾಗದು ಎಂದು ಬಾಲ್ಕಿವಚನ ಹಿರೇಮಠದ ನಾಡೋಜ ಡಾ.ಬವಲಿಂಗ ಪಟ್ಟದ್ದೇವರು ಹೇಳಿದರು.

ತಾಲೂಕಿನ ನಾಗೇನಹಳ್ಳಿ ಸನಿಹದ ಚನ್ನಬಸವಣ್ಣನ ಗುಡ್ಡದಲ್ಲಿರುವ ಅರಿವು ಆಚಾರ ಅನುಭಾವ ಟಸ್ಟ್ ಇಷ್ಟಲಿಂಗ ಅಧ್ಯಯನ ಕೇಂದ್ರದಲ್ಲಿ ಗುರುವಾರ ಜರುಗಿದ ಗುರುವಂದನದಲ್ಲಿ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದರು. 12ನೇ ಶತಮಾನದಲ್ಲಿ ಇಷ್ಟಲಿಂಗೋಪಾಸನೆಯ ಲಿಂಗಾಯತ ಧರ್ಮ. ಬಸವಣ್ಣನವರು ಸ್ಥಾಪಿಸಿದ್ದು ಲಿಂಗಾಯತ ಧರ್ಮ. ಪಂಚ ಪೀಠದವರು ಬಸವಣ್ಣನವರನ್ನ ಧರ್ಮಗುರು ಎನ್ನದೇ, ಬರೀ ಸುಳ್ಳನ್ನೇ ವೈಭವಯುತವಾಗಿ ಹೇಳುತ್ತಿದ್ದು, ಸುಳ್ಳಿಂದ ಜನರನ್ನ ಮರುಳು ಮಾಡಲಾಗದು. ಈಗ ಜನರು ಜಾಗೃತರಾಗುತ್ತಿದ್ದು, ಶಿಕ್ಷಣವಂತರು, ಶರಣ ಸಾಹಿತ್ಯದ ವಚನಗಳ ನಿಜ ಅನುಭಾವವ ತಿಳಿಯಬಲ್ಲವರಾಗಿದ್ದಾರೆ. ಲಿಂಗಾಯತ ಧರ್ಮ ತಿರುಳನ್ನ ತಿಳಿಯಬಲ್ಲರು, ಈ ಧರ್ಮದ ಜೀವಾಳತನವೇ ಇಷ್ಟಲಿಂಗೋಪಾಸನೆ ಒಂದೇ ಪ್ರಧಾನವಾಗಿದೆ ಎಂದರು.

ಸ್ಥಳೀಯ ಇಷ್ಟಲಿಂಗ ಅಧ್ಯಯನ ಕೇಂದ್ರವು ಇಷ್ಟಲಿಂಗ ಯೋಗ ಧ್ಯಾನ ಅರ್ಚನೆಯನ್ನ ಜನತೆಗೆ ನಿರಂತರ ಜಾಗೃತಿ ಅರಿವುಗೊಳಿಸುವಿಕೆಯು ಪ್ರಶಂಸಾರ್ಹ ಸಂಗತಿ. ಈ ಸಮಾಜಿಕ ಸೇವಾ ಕಾರ್ಯವು ಮತ್ತಷ್ಟು ವಿಸ್ತೃತಗೊಳ್ಳಲಿ, ಸ್ಥಳೀಯ ಇಷ್ಟಲಿಂಗ ಅಧ್ಯಯನ ಕೇಂದ್ರದ ಕಾರ್ಯಗಳು ಜಿಲ್ಲಾಮಟ್ಟ ರಾಜ್ಯ ಮಟ್ಟದಲ್ಲಿ ಬೆಳೆಯುತ್ತ ಬಂದು ಲಿಂಗಾಯತ ಧರ್ಮ ನಿಷ್ಠೆಯ ನಿಜ ಧರ್ಮಾಚರಣೆಯ ಜನತೆಗೆ ಅರಿವು ಗೊಳಿಸಬೇಕೆಂದು ಹೇಳಿದರು.

ಟ್ರಸ್ಟಿನ ಟಿ.ಹೆಚ್.ಬಸವರಾಜ ಅವರು ಇಷ್ಟಲಿಂಗ ಅಧ್ಯಯನ ಕೇಂದ್ರದ ಕಾರ್ಯಗಳು, ಶಿಬಿರಗಳು, ಇಷ್ಟಲಿಂಗ ಯೋಗ ಧ್ಯಾನ ಪೂಜಾರ್ಚನೆ, ಗುರುಮಂತ್ರ ಪಠಣ ಕಾರ್ಯ ಮೊದಲಾಗಿ ತಿಳಿಯಪಡಿಸಿದರು.

ಇಷ್ಟಲಿಂಗ ಅಧ್ಯಯನ ಕೇಂದ್ರ ಸಂಸ್ಥಾಪನಾ ರೂವಾರಿ ಡಾ ಅಜಯ್ ಕುಮಾರ್, ಮುಖಂಡರಾದ ಬಸವರಾಜ ಮಾವಿನಹಳ್ಳಿ, ಶ್ರೀನಿವಾಸ, ಕೋರಿಶೆಟ್ಟಿ ಲಿಂಗಪ್ಪ, ಮಲ್ಲೇಶಪ್ಪ, ಬಸವಕಿರಣ ಸ್ವಾಮಿ, ಅವರಾಧಿ, ಡಾ.ಮಹಾಬಲೇಶ್ವರರೆಡ್ಡಿ, ಬಿ.ಜಿ.ಈಶ್ವರಪ್ಪ, ನಾಡಗೌಡ್ರು, ಹೇಮಗಿರಿಯಪ್ಪ, ದೊಡ್ಡಬಸಪ್ಪ, ನಂದೀಶ ದಂಡಿ, ಮತ್ತಿತರು ಇದ್ದರು.

# ಗ್ರಾಮೀಣಾಭಿವೃದ್ಧಿಗೆ ಜನರ ಸಹಭಾಗಿತ್ವ ಅಗತ್ಯ

**ಜಿಪಂ ಸಿಇಒ ಬಿ.ಸದಾಶಿವ ಪ್ರಭು ಹೇಳಿಕೆ | ತೊಗರಿಕಟ್ಟೆಯಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ**

**ಹಂಪಿ ಟೈಮ್ಸ್ ಹರಪನಹಳ್ಳಿ**




ಗ್ರಾಮೀಣಾಭಿವೃದ್ಧಿ ಪರಿಕಲ್ಪನೆಯು ಯಶಸ್ವಿ ಆಗಲು ಸಾರ್ವಜನಿಕರ ಸಹಕಾರ ಹಾಗೂ ಸಹಭಾಗಿತ್ವ ಅಗತ್ಯ ಇದೆ ಎಂದು ವಿಜಯನಗರ ಜಿಲ್ಲಾ ಪಂಚಾಯಿತಿಯ ಸಿಇಒ ಬಿ.ಸದಾಶಿವ ಪ್ರಭು ಹೇಳಿದರು.

ತಾಲೂಕಿನ ತೊಗರಿಕಟ್ಟಿ ಗ್ರಾಮ ಪಂಚಾಯಿತಿಯಲ್ಲಿ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಾರ್ವಜನಿಕ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದರು. ಗ್ರಾಮೀಣಾಭಿವೃದ್ಧಿ ಪರಿಕಲ್ಪನೆಯಲ್ಲಿ ಜನರು ತೊಡಗಬೇಕು. ಏಕೆಂದರೆ, ನಾವು ಮಾಡುವ ಕಾರ್ಯಗಳು ಸರಿಯಾಗಿ ನಡೆಯಬೇಕು. ಒಂದು ವೇಳೆ ತಪ್ಪು ಮಾರ್ಗದಲ್ಲಿ ನಡೆದರೆ ಸಾಮಾಜಿಕ ಪರಿಶೋಧನಾ ಸೇರಿದಂತೆ ವಿವಿಧ ಪರಿಶೋದನಾ ತಂಡ ಇರುತ್ತದೆ ಹಾಗೂ ಸೂಕ್ತ ವೇದಿಕೆಗಳು ಸಹ ಇವೆ. ಆದ್ದರಿಂದ ಈ ಸಭೆಯಲ್ಲಿ ಎಲ್ಲರೂ ಮುಕ್ತವಾಗಿ ಮಾತನಾಡಬೇಕು. ಸರ್ಕಾರದ ನೀತಿ-ನಿಯಮಗಳಲ್ಲಿ ಏನಾದರೂ ಬದಲಾವಣೆ ಬೇಕೆಂದರೆ ತಮ್ಮ ಅಹವಾಲುಗಳ ಮೂಲಕವೂ ತಿಳಿಸಬಹುದು ಎಂದು ಹೇಳಿದರು.

ಕುಂದು-ಕೊರತೆಗಳಿಗೆ ಶೀಘ್ರ ಪರಿಹಾರ:

ಜನರಿಗೆ ನಿವೇಶನ, ಸಿಸಿ ರಸ್ತೆ, ಬಾಕ್ಸ್ ಚರಂಡಿ, ಶಾಲಾ,ಅಂಗನವಾಡಿಗಳಿಗೆ ಕಾಂಪೌಂಡ್ ಹಾಗೂ ಶೌಚಾಲಯ ನಿರ್ಮಿಸವುದಲ್ಲದೇ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಬೇಕು, ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಶೀಘ್ರ ಬಗೆಹರಿಸಬೇಕು, ಆರೋಗ್ಯ ಉಪಕೇಂದ್ರಕ್ಕೆ ನಿರಂತರ ವೈದ್ಯರ ಭೇಟಿ ಆಗಬೇಕು, ಇನ್ನು ಸ್ವಸಹಾಯ ಗುಂಪುಗಳಿಗೆ ವರ್ಕ್ ಶೆಡ್ ನಿರ್ಮಿಸಬೇಕು ಎಂದು ವಿವಿಧ ಗ್ರಾಮಗಳ ಜನರು ಸಭೆಯಲ್ಲಿ ನಾನಾ ಅಹವಾಲು ಸಲ್ಲಿಸಿದರು. ಇದರಲ್ಲಿ ಶಾಲಾ ಕಾಮಗಾರಿ ಸೇರಿದಂತೆ ವಿವಿಧ ಕುಂದು-ಕೊರತೆಗಳನ್ನು ಶೀಘ್ರ ಪರಿಹಾರ ಮಾಡಲು ಸ್ಥಳದಲ್ಲೇ ಅಧಿಕಾರಿಗಳಿಗೆ ಸಿಇಒ ಅವರು ಗಡುವು ನೀಡಿ ಸೂಚಿಸಿದರು.

ಇಲ್ಲಿನ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ಪ್ರಕಾಶ್ ಮಾತನಾಡಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾವುದೇ ಗ್ರಾಮಸ್ಥರು ಕಚೇರಿಯ ವೇಳೆಯಲ್ಲೂ ಕುಂದು-ಕೊರತೆಗಳನ್ನು ಹೇಳಿಕೊಳ್ಳಬಹುದು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಸರಿತಾಬಾಯಿ ಯುವರಾಜ ನಾಯ್ಕ, ಪಿಡಿಒ ರಮೇಶ್, ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ತಾಪಂ ಪ್ರಭಾರ ವ್ಯವಸ್ಥಾಪಕ ದಾದಾ ಖಲೀಲ್ ಸಾಬ್, ತಾಲೂಕು ಐಇಸಿ ಸಂಯೋಜಕ ಕೆ.ವಸಿಗೇರಪ್ಪ ಚಾಗನೂರು, ಗ್ರಾಪಂ ಸದಸ್ಯರಾದ ಡಿ.ಗೋಣೆಪ್ಪ, ಕೆ.ಆನಂದ, ಹಳ್ಳಿ ನೇತ್ರಾವತಿ, ವಿಜಿಬಾಯಿ, ದೇವ್ಲನಾಯ್ಕ, ಎಇಇ ಕೆ.ಚ್.ಹರೀಶ್, ಮಲ್ಲೇಶ್ ನಾಯ್ಕ, ಕಾರ್ಯದರ್ಶಿ ಶಿವಾಜಿ ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು ತಾಪಂ, ಗ್ರಾಪಂ ಸಿಬ್ಬಂದಿ ಮತ್ತಿತರರು ಇದ್ದರು.

> **ನಿವೇಶನ ಇಲ್ಲದವರಿಗೆ ಮೊದಲ ಆದ್ಯತೆ ನೀಡಬೇಕು. ನಿರ್ಗತಿಕರು, ಅಂಗವಿಕಲರು, ಮಾಜಿ ಸೈನಿಕರಿಗೆ ಪ್ರಥಮ ಪ್ರಾಶ್ಯಸ್ತ್ಯ ನೀಡಬೇಕು. ನಿವೇಶನ ಕಲ್ಪಿಸುವುದು ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿಯ ಜವಾಬ್ದಾರಿಯೂ ಆಗಿದೆ.**
> **– ಬಿ.ಸದಾಶಿವ ಪ್ರಭು,**
> ಸಿಇಒ, ವಿಜಯನಗರ ಜಿಲ್ಲಾ ಪಂಚಾಯಿತಿ

# ಪುಸ್ತಕಗಳ ಮಳಿಗೆ ಕಾಯ್ದಿರಿಸಲು ಅರ್ಜಿ ಆಹ್ವಾನ



**ಹಂಪಿ ಟೈಮ್ಸ್ ಹೊಸಪೇಟೆ**

2024ನೇ ಸಾಲಿನ ಹಂಪಿ ಉತ್ಸವ ಹಿನ್ನಲೆಯಲ್ಲಿ ವಿವಿಧ ಮಳಿಗೆಗಳನ್ನು ಸಿದ್ದಪಡಿಸಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಪ್ರಕಾಶಕರಿಂದ ಮಳಿಗೆ ಕಾಯ್ದಿರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಉತ್ಸವದಲ್ಲಿ ಮಳಿಗೆಗಳು 10/10 ಅಡಿ ಅಳತೆಯಲ್ಲಿದ್ದು, 2 ಮೇಜುಗಳನ್ನು ಒದಗಿಸಲಾಗುವುದು. ಹೆಚ್ಚಿನ ಮೇಜುಗಳಿಗಾಗಿ ಮುಂಚಿತವಾಗಿ ಬೇಡಿಕೆ ಸಲ್ಲಿಸಬೇಕು. ಪ್ರಕಾಶಕರು ತಮ್ಮ ಹೆಸರನ್ನು ನೋಂದಾಯಿಸಲು ಅಧ್ಯಕ್ಷರು, ಹಂಪಿ ಉತ್ಸವ, ವಿಜಯನಗರ ಇವರ ಹೆಸರಿನಲ್ಲಿ ರೂ. 3000 ಮೊತ್ತದ ಡಿ.ಡಿ.ಯನ್ನು ಜನವರಿ 18 ರೊಳಗಾಗಿ ಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಬಹುದು. ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ, ಸಂಶೋಧನೆ, ಜನಪದ ಸಾಹಿತ್ಯ, ಪ್ರವಾಸ, ಹವ್ಯಾಸ ಮುಂತಾದ ಪ್ರಕಾರಗಳ ಪುಸ್ತಕಗಳನ್ನು ಪ್ರದರ್ಶನ ಮಾಡಬಹುದಾಗಿದೆ. ಯಾವುದೇ ಕಾರಣಕ್ಕೂ ಕೆಟ್ಟ ಅಭಿರುಚಿಯನ್ನು ಬೆಳೆಸುವ, ಜನರ ಮಧ್ಯೆ ವಿರಸ ಮೂಡಿಸುವ, ದೇಶದ ಐಕ್ಯತೆ ಹಾಗೂ ಸಾಮರಸ್ಯಕ್ಕೆ ಧಕ್ಕೆ ತರುವ ಹಾಗೂ ನಿಷೇಧಿತ ಪುಸ್ತಕಗಳನ್ನು ಪ್ರದರ್ಶಿಸಿ ಮಾರಾಟ ಮಾಡುವಂತಿಲ್ಲ.

ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಾಣಿಗಾಗಿ ಬಳ್ಳಾರಿ/ವಿಜಯನಗರ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಫಾಲಾಕ್ಷ ಟಿ. ಮೊ.ಸಂ: 8861128848, 8310969813 ಹಾಗೂ ಚಿತ್ತವಾಡಿಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ಹಾಗೂ ನೋಡಲ್ ಅಧಿಕಾರಿಗಳಾದ ನಾಗರಾಜ್ ಹವಾಲ್ದಾರ್ ಮೊ.ಸಂ: 8197123522 ಹಾಗೂ ವಿನೋದ ಮೊ.ಸಂ: 8123890903 ಗೆ ಸಂಪರ್ಕಿಸಬಹುದಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರು ತಿಳಿಸಿದ್ದಾರೆ.


**Vinayaka Education Society (R)**
Harihara Road, Hospet, Vijayanagara Dist.
e-mail Id : veshpt73@gmail.com
Mobile No : 8296331645

**Driver Required**

| Sl.No | Post | Qulification | No. Posts |
|---|---|---|---|
| 01 | Driver | 8th Std, Heavy Licence with Badge 5 Years Experience | 04 |

Eligible candidates can apply within 7 days
Address :
National English Medium High School
Harihara Road, Hosapete-583203


# ಯುವನಿಧಿ ಫಲಾನುಭವಿಗಳ ನೋಂದಣಿಗೆ ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**

ಯುವನಿಧಿ ಯೋಜನೆಯಡಿ ನೋಂದಾಯಿತ ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಹಾಗೂ ಅರ್ಹ ಅಭ್ಯರ್ಥಿಗಳು ಯೋಜನೆಯಡಿ ನೋಂದಣಿ ಮಾಡಿಕೊಳ್ಳುವಂತೆ ಜಿಲ್ಲಾ ಕೌಶಲ್ಯಭಿವೃದ್ಧಿ ಅಧಿಕಾರಿಗಳಾದ ಪ್ರಾಣೇಶ್ ತಿಳಿಸಿದ್ದಾರೆ.

ಯುವನಿಧಿ ಯೋಜನೆಯಡಿ ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಕೌಶಲ್ಯಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಡಿಯಲ್ಲಿ ಯುವನಿಧಿ ಯೋಜನೆ ಅನುಷ್ಠಾನವಾಗಿದ್ದು, ಈ ಯೋಜನೆಯಡಿಯಲ್ಲಿ ಪ್ರತಿ ತಿಂಗಳಿಗೆ ಪದವೀಧರಿಗೆ ರೂ.3000 ಮತ್ತು ಡಿಪ್ಲೋಮಾ ಉತ್ತೀರ್ಣರಾದವರಿಗೆ ರೂ.1500 ರಂತೆ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳಿಗೆ ನೀಡಲಾಗುತ್ತದೆ. ಜನವರಿ 12ರಂದು ಸ್ವಾಮಿ ವಿವೇಕಾನಂದ ಜಯಂತಿ ದಿನದಂದು ಶಿವಮೊಗ್ಗ ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ನೇರವೇರಲಿದೆ.

ನೋಂದಣಿ ಮಾಡದೇ ಇರುವ ಫಲಾನುಭವಿಗಳು ನೋಂದಣಿ ಮಾಡಲು ಸೇವಾ ಸಿಂದು ಪೋರ್ಟಲ್ https://sevasindhugs.karnataka.gov.in ನಲ್ಲಿ ನೋಂದಾಯಿಸಿಕೊಳ್ಳಬಹುದು. ಅಥವಾ ಉಚಿತವಾಗಿ ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಬಾಪೂಜಿ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಸ್ವಯಂ ಘೋಷಿತ ನಿರುದ್ಯೋಗ ಪ್ರಮಾಣ ಪತ್ರ ದೃಢಿಕರಣ ಕಡ್ಡಾಯವಾಗಿರುತ್ತದೆ.

ಅರ್ಜಿಸಲ್ಲಿಸಲು ಫಲಾನುಭವಿಗಳು 2023ರಲ್ಲಿ ಪದವಿ ಅಥವಾ ಡಿಪ್ಲೋಮಾ ಉತ್ತೀರ್ಣಾಗಿರಬೇಕು. ಕರ್ನಾಟಕದಲ್ಲಿ ಕನಿಷ್ಠ 6 ತಿಂಗಳು ವಾಸವಿರಬೇಕು. ಕನಿಷ್ಠ 6 ತಿಂಗಳ ಅವಧಿಯವರೆಗೆ ಸರ್ಕಾರಿ, ಖಾಸಗಿ ಉದ್ಯೋಗ ಹೊಂದಿಲ್ಲದವರು. ಸ್ವಯಂ ಉದ್ಯೋಗ ಹೊಂದಿಲ್ಲದವರು. ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವ ಅರ್ಹ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ., ಪಿ.ಯು.ಸಿ, ಪದವಿ ಅಥವಾ ಡಿಪ್ಲೋಮಾ ಪ್ರಮಾಣ ಪತ್ರಗಳೊಂದಿಗೆ ನೋಂದಾಯಿಸಿ ಯೋಜನೆ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ 18005999918 ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ವಚನ ಅರಿವು

# ಲಿಂಗ ನಿಷ್ಠೆ

ಹಾದರದ ಮಿಂಡನ ಹತ್ತಿರ ಮಡಗಿಕೊಂಡು,
ಮನೆಯ ಗಂಡನ ಒಲ್ಲೆನೆಂದಡೆ ಒಲಿವನೆ?
ತಾ ಶಿವಭಕ್ತನಾಗಿ, ತನ್ನಂಗದ ಮೇಲೆ ಲಿಂಗವಿದ್ದು
ಮತ್ತೆ ಬಿನ್ನ ಶೈವಕ್ಕೆರಗುವುದೆ ಹಾದರ,
ಕೂಡಲಸಂಗಯ್ಯನು ಅವರ ಮೂಗ ಕೊಯ್ಯದೆ ಮಾಣ್ಬನೆ?

– ಬಸವಣ್ಣ

ಮದುವೆ ಮಾಡಿಕೊಂಡ ಗಂಡನ ಜೊತೆಗೆ ಹೆಂಡತಿ ನಿಷ್ಠೆ, ಪ್ರಾಮಾಣಿಕತೆಯಿಂದ ಬದುಕಬೇಕು. ಅದನ್ನು ಬಿಟ್ಟು ಪರಪುರುಷನ ಜೊತೆ ಸಂಬಂದವಿಟ್ಟುಕೊಂಡರೆ ಅವಳಿಗೆ ಒಳ್ಳೆಯ ಜೀವನ ಇರುವುದಿಲ್ಲ. ಪತಿ ಆಕೆಯನ್ನು ಪ್ರೀತಿಸುವುದಿಲ್ಲ. ಹಾಗೆಯೇ ಶಿವಭಕ್ತರಂತೆ ಇದ್ದು, ಲಿಂಗಧರಿಸಿ ಮತ್ತೆ ಅನ್ಯ ದೇವರಿಗೆ ನಡೆದುಕೊಳ್ಳುವವರು ಶರಣಸತಿ, ಲಿಂಗಪತಿ ಭಾವ ಇಲ್ಲದವರಾಗಿರುತ್ತಾರೆ. ಅವರು ಹಾದರಿಗರಂತೆ ಇಂತಹವರ ಮೂಗ ಕೊಯ್ದು ಶಿಕ್ಷಿಸುತ್ತಾನೆ ಶಿವ ಎನ್ನುತ್ತದೆ ಬಸವ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಕೊಪ್ಪಳ ವಿಶ್ವವಿದ್ಯಾಲಯ-ನಿಫ್ಟೆಮ್ ಸಂಸ್ಥೆ, ತಂಜಾವೂರು ಜೊತೆಗೆ ಒಪ್ಪಂದ




**ಹಂಪಿ ಟೈಮ್ಸ್ ಕೊಪ್ಪಳ**
ತಮಿಳುನಾಡಿನ ತಂಜಾವೂರಿನಲ್ಲಿರುವ ಭಾರತ ಸರ್ಕಾರದ ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ನಿರ್ವಹಣೆ ಸಂಸ್ಥೆಯೊಂದಿಗೆ ಕೊಪ್ಪಳ ವಿಶ್ವವಿದ್ಯಾಲಯ ಶೈಕ್ಷಣಿಕ, ಸಂಶೋಧನೆ, ಕೌಶಲ್ಯ, ಔದ್ಯೋಗಿಕ ಕ್ಷೇತ್ರಗಳಲ್ಲಿ ಸಹಕಾರ, ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳಲು ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ. ಕೆ.ರವಿ ಅವರು ಹಾಗೂ ನಿಫ್ಟೆಮ್ (NIFTEM - National InstituteofFoodTechnology,Entrepreneurship and Management) ಸಂಸ್ಥೆ, ತಂಜಾವೂರಿನ ನಿರ್ದೇಶಕರಾದ ಡಾ. ವಿ.ಪಳನಿಮುತ್ತು ಅವರು ಇತ್ತೀಚೆಗೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಡಂಬಡಿಕೆಯ ಫಲವಾಗಿ ಮುಂದಿನ ಶೈಕ್ಷಣಿಕ ವರ್ಷದಿಂದ ಕೊಪ್ಪಳ ವಿಶ್ವವಿದ್ಯಾಲಯ ಆಹಾರ ತಂತ್ರಜ್ಞಾನ, ಆಹಾರ ನಿರ್ವಹಣೆ ಮತ್ತು ಆಹಾರಕ್ಕೆ ಸಂಬಂಧಿಸಿದ ಉದ್ಯಮಶೀಲತೆ ಕುರಿತ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ಆರಂಭಿಸಲಿದೆ.

ತಂಜಾವೂರಿನ ಈ ನಿಫ್ಟೆಮ್ ಜೊತೆಗಿನ ನೂತನ ಒಪ್ಪಂದದಿಂದಾಗಿ ಈ ಹಿಂದುಳಿದ ಕೊಪ್ಪಳ ಭಾಗದ ವಿದ್ಯಾರ್ಥಿಗಳು ಆಹಾರ ತಂತ್ರಜ್ಞಾನ, ಕೈಗಾರಿಕೆ, ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ ಉನ್ನತ ಜ್ಞಾನ ಸಂಪಾದಿಸಲು ಅನುಕೂಲವಾಗುತ್ತದೆ. ಸಂಶೋಧನೆಗೆ ಹೊಸ ದಿಕ್ಕು, ಹೊಸ ಆವಿಷ್ಕಾರ ಹಾಗೂ ಉದ್ಯೋಗ ಸೃಷ್ಟಿಗೊಳ್ಳಲು ವರದಾನವಾಗಲಿದೆ.

ಮುಂಬರುವ ದಿನಗಳಲ್ಲಿ ಕೊಪ್ಪಳ ವಿಶ್ವವಿದ್ಯಾಲಯವು ಇನ್ನೂ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಈ ಭಾಗದ ಪ್ರಗತಿಗೆ ಅವಿರತವಾಗಿ ಶ್ರಮಿಸುತ್ತದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳು ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

ಇಂದು ರಾಷ್ಟ್ರೀಯ ಯುವ ದಿನ (ಜನವರಿ 12)

# ಭಾರತದ ಆಧ್ಯಾತ್ಮಿಕತೆಯ ಶಿಖರ... ಸ್ವಾಮಿ ವಿವೇಕಾನಂದ

ಬೀದಿಯಲ್ಲಿ ಕಾಷಾಯ ವಸ್ತ್ರ ಧರಿಸಿದ ಆ ಯುವ ಸನ್ಯಾಸಿ ನಾಲ್ಕಾರು ನಾಯಿಗಳ ಗುಂಪು ಬೆನ್ನಟ್ಟಿ ಬಂದಾಗ ಹಿಂತಿರುಗಿ ಓಡಲಾರಂಭಿಸಿದ. ಆಗ ಅಲ್ಲಿಯೇ ಇದ್ದ ಓರ್ವ ವ್ಯಕ್ತಿ ಸನ್ಯಾಸಿಯನ್ನು ಕುರಿತು ಹಿಂತಿರುಗಿ ಓಡಬೇಡ ಕೈಯಲ್ಲಿರುವ ಕೋಲನ್ನು ಗಟ್ಟಿಯಾಗಿ ಎತ್ತಿ ಹಿಡಿ, ಎಂದು ಹೇಳಿದ. ಯುವ ಸನ್ಯಾಸಿಯು ಅಪರಿಚಿತ ವ್ಯಕ್ತಿ ಹೇಳಿದ ಮಾತಿನಂತೆ ಕೋಲನ್ನು ಹಿಡಿದು ದೃಢವಾಗಿ ನಿಂತನು. ಸನ್ಯಾಸಿಯ ದೃಢ ನಿಲುವನ್ನು ಕಂಡ ನಾಯಿಗಳು ಬಾಲಮುದುರಿಕೊಂಡು ಹೊರಟು ಹೋದವು. ಜೀವನದ ಬಹುಮುಖ್ಯ ಪಾಠವೊಂದನ್ನು ಕಲಿತ ಸನ್ಯಾಸಿ "ಕಷ್ಟಗಳು ಬಂದಾಗ ಹೆದರಿಕೊಂಡು ಕುಳಿತುಕೊಳ್ಳದೆ ಅವುಗಳನ್ನು ಧೈರ್ಯವಾಗಿ ಎದುರಿಸಿ" ಎಂದು ಜಗತ್ತಿಗೆ ಸಾರಿದ. ಭಾರತದ ಕೀರ್ತಿಯನ್ನು ಜಗದೆತ್ತರಕ್ಕೆ ಬೆಳೆಸಿದ ಆಧ್ಯಾತ್ಮದ ಭವ್ಯ ಇತಿಹಾಸವನ್ನು ರಚಿಸಿದ ಆ ವೀರ ವಿರಾಗಿಯೇ ನಮ್ಮ ಸ್ವಾಮಿ ವಿವೇಕಾನಂದರು.

ಸ್ವಾಮಿ ವಿವೇಕಾನಂದರು ಇಂದಿನ ಪಶ್ಚಿಮ ಬಂಗಾಳದ ಕೊಲ್ಕತ್ತದಲ್ಲಿ ಜನವರಿ 12 1863 ರಲ್ಲಿ ಜನಿಸಿದರು ತಂದೆ ವಿಶ್ವನಾಥ ದತ್ತ ತಾಯಿ ಭುವನೇಶ್ವರಿ ದೇವಿ. ವಿವೇಕಾನಂದರ ಪೂರ್ವ ನಾಮ ನರೇಂದ್ರನಾಥ ದತ್ತ. ವಕೀಲರಾದ ವಿಶ್ವನಾಥ ದತ್ತರ ಬಳಿ ಸಾಕಷ್ಟು ಜನ ತಮ್ಮ ನ್ಯಾಯಾಂಗ ಸಂಬಂಧದ ತೊಂದರೆಗಳ ನಿವಾರಣೆಗೆ ಆಗಮಿಸುತ್ತಿದ್ದರು. ತಾಯಿ ಭುವನೇಶ್ವರಿ ದೇವಿ ಅತ್ಯಂತ ಸಾಧುವೂ ದೈವಭಕ್ತಿಯೂ ಉಳ್ಳ ಹೆಣ್ಣುಮಗಳು. ಆಕೆ ಮಗನನ್ನು ಬೆಳೆಸುವಾಗ ನಮ್ಮ ನಾಡನ್ನಾಳಿದ ವೀರರ ಧೀರರ ಚರಿತೆಯನ್ನು ಹೇಳುತ್ತಾ ಆತನಲ್ಲಿ ಉದಾತ್ತ ಭಾವನೆಗಳ ಚಿಂತನೆಗಳನ್ನು ದೇಶಭಕ್ತಿಯ ವಿಚಾರಗಳನ್ನು ಬಿತ್ತುತ್ತಿದ್ದಳು.

ಉತ್ತಮ ಗ್ರಹಿಕೆ ಮತ್ತು ಜಾಣ್ಮೆಯನ್ನು ಹೊಂದಿದ್ದ ನರೇಂದ್ರರು ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡಿದರು. ಮೊದಲು ಮೆಟ್ರೋಪಾಲಿಟನ್ ಸಂಸ್ಥೆಯಲ್ಲಿ ಮತ್ತು ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ಅವರು ಕಾಲೇಜಿನಿಂದ ಪದವಿ ಪಡೆದರಲ್ಲದೇ ವಿವಿಧ ವಿಷಯಗಳ ಬಗ್ಗೆ ಅಪಾರ ಜ್ಞಾನವನ್ನು ಗಳಿಸಿದರು. ಅವರು ಕ್ರೀಡೆ, ಜಿಮ್ನಾಸ್ಟಿಕ್ಸ್, ಕುಸ್ತಿ ಮತ್ತು ದೇಹದಾರ್ಢ್ಯದಲ್ಲಿ ಸಕ್ರಿಯರಾಗಿದ್ದರು. ಅವರು ಓರ್ವ ಅತ್ಯುತ್ತಮ ಓದುಗ ಕೂಡ. ಅತಿಶಯೋಕ್ತಿಯಾಗಿ ಹೇಳುವುದಾದರೆ ಸೂರ್ಯನ ಕೆಳಗೆ ಇರುವ ಬಹುತೇಕ ಎಲ್ಲವನ್ನೂ ಅವರು ಓದಿದರು. ಒಂದು ಕಡೆ ಭಗವದ್ಗೀತೆ ಮತ್ತು ಉಪನಿಷತ್ತುಗಳಂತಹ ಹಿಂದೂ ಧರ್ಮಗ್ರಂಥಗಳನ್ನು ಪರಿಶೀಲಿಸಿದ ಅವರ ಗ್ರಹಣ ಶಕ್ತಿ ಹೇಗಿತ್ತೆಂದರೆ ಅವರು ಪುಸ್ತಕವನ್ನು ಅಕ್ಷರಕ್ಷರ,ಪುಟ ಪುಟವಾಗಿ ಓದುತ್ತಿರಲಿಲ್ಲ. ಒಂದಿಡೀ ಪುಸ್ತಕದ ಹೂರಣವನ್ನು ಅವರು ಕೆಲವೇ ನಿಮಿಷಗಳಲ್ಲಿ ಓದಬಲ್ಲವರಾಗಿದ್ದರು. ಅವರು ಡೇವಿಡ್ ಹ್ಯೂಮ್, ಜೋಹಾನ್ ಗಾಟ್ಲೀಬ್ ಫಿಚ್ಟೆ ಮತ್ತು ಹರ್ಬರ್ಟ್ ಸ್ಪೆನ್ಸರ್ ಅವರಿಂದ ಪಾಶ್ಚಿಮಾತ್ಯ ತತ್ವಶಾಸ್ತ್ರ, ಇತಿಹಾಸ ಮತ್ತು ಆಧ್ಯಾತ್ಮಿಕತೆಯನ್ನು ಅಧ್ಯಯನ ಮಾಡಿದರು.

ಇಷ್ಟೆಲ್ಲಾ ಓದಿದ ಸ್ವಾಮಿ ವಿವೇಕಾನಂದರು ಲೌಕಿಕದೆಡೆ ಕೊಂಚ ನಿರಾಸಕ್ತಿಯನ್ನು ಬೆಳೆಸಿಕೊಂಡಿದ್ದರು. ಮುಂದೆ ವಿವೇಕಾನಂದರು ತರುಣಾವಸ್ಥೆಗೆ ಬಂದಾಗ ವಿಶ್ವನಾಥ ದತ್ತರ ಹಠಾತ್ ನಿಧನದ ನಂತರದ ಮನೆಯ ದುಸ್ತರ ಪರಿಸ್ಥಿತಿಗಳು ಅವರಿಗೆ ಲೌಕಿಕ ಬದುಕಿನ ಸತ್ಯಗಳ ಅನಾವರಣ ಮಾಡಿದ್ದವು.1884 ರಲ್ಲಿ ತನ್ನ ತಂದೆಯ ಮರಣದ ನಂತರ ತನ್ನ ತಾಯಿ ಮತ್ತು ಕಿರಿಯ ಸಹೋದರರನ್ನು ಸಲಹ ಬೇಕಾಗಿದ್ದರಿಂದ ಅವರ ಕುಟುಂಬ ಸಾಕಷ್ಟು ಆರ್ಥಿಕ ಸಂಕಷ್ಟಕ್ಕೆ ಒಳಗಾಯಿತು. ದೇವರ ಮೊರೆ ಕೂಡ ಹೋದರು. ಒಮ್ಮೆ ದೇವಿಯನ್ನು ಎದುರಿಸಿದ ಅವರು ಹಣ ಮತ್ತು ಸಂಪತ್ತನ್ನು ಕೇಳಲು ಸಾಧ್ಯವಾಗಲಿಲ್ಲ, ಬದಲಿಗೆ ಅವರು 'ವಿವೇಕ' (ಆತ್ಮಸಾಕ್ಷಿ) ಮತ್ತು 'ವೈರಾಗ್ಯ' (ಏಕಾಂತ) ಕೇಳಿದರು. ಆ ದಿನವು ನರೇಂದ್ರನಾಥರ ಸಂಪೂರ್ಣ ಆಧ್ಯಾತ್ಮಿಕ ಜಾಗೃತಿಯನ್ನು ಗುರುತಿಸಿತು ಮತ್ತು ಅವರು ತಪಸ್ವಿ ಜೀವನ ವಿಧಾನಕ್ಕೆ ಆಕರ್ಷಿತರಾದರು.

ಅಧ್ಯಯನ ಜ್ಞಾನವು ಅವರಿಗೆ ದೇವರ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡಿತು ಮತ್ತು ಸ್ವಲ್ಪ ಸಮಯದವರೆಗೆ ಅವರು ಅಜ್ಞೇಯತಾವಾದದಲ್ಲಿ ನಂಬಿಕೆ ಇರಿಸಿದ್ದರು. ಆದರೂ ತಾಯಿಯ ಧಾರ್ಮಿಕ ಪ್ರಜ್ಞೆಯ ಅಡಿಯಲ್ಲಿ ಬೆಳೆದ ಅವರು ಪರಮಾತ್ಮನ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಾಗಲಿಲ್ಲ. ಅವರು ಕೆಲವು ಕಾಲ ಕೇಶವಚಂದ್ರಸೇನರ ನೇತೃತ್ವದ ಬ್ರಹ್ಮೋ ಆಂದೋಲನದೊಂದಿಗೆ ಸಂಬಂಧ ಹೊಂದಿದ್ದರು.

ಬ್ರಹ್ಮ ಸಮಾಜವು ಮೂರ್ತಿಪೂಜೆ, ಮೂಢನಂಬಿಕೆಗಳಿಂದ ಕೂಡಿದ ಹಿಂದೂ ಧರ್ಮಕ್ಕಿಂತ ಭಿನ್ನವಾಗಿ ಒಬ್ಬ ದೇವರನ್ನು ಗುರುತಿಸಿದೆ. ಅವರ ಮನಸ್ಸಿನಲ್ಲಿ ದೇವರ ಅಸ್ತಿತ್ವದ ಬಗ್ಗೆ ಇದ್ದ ತಾತ್ವಿಕ ಪ್ರಶ್ನೆಗಳಿಗೆ ಉತ್ತರವಿಲ್ಲ. ಈ ಆಧ್ಯಾತ್ಮಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನರೇಂದ್ರರು ಸ್ಕಾಟಿಷ್ ಚರ್ಚ್ ಕಾಲೇಜಿನ ಪ್ರಾಂಶುಪಾಲರಾದ ವಿಲಿಯಂ ಹ್ಯಾಸ್ಟಿ ಅವರಿಂದ ಶ್ರೀ ರಾಮಕೃಷ್ಣರ ಬಗ್ಗೆ ಮೊದಲು ಕೇಳಿದರು.

ಇದಕ್ಕೂ ಮೊದಲು, ದೇವರ ಬಗೆಗಿನ ಅವರ ಬೌದ್ಧಿಕ ಅನ್ವೇಷಣೆಯನ್ನು ಪೂರೈಸಲು, ನರೇಂದ್ರನಾಥ್ ಅವರು ಎಲ್ಲಾ ಧರ್ಮಗಳ ಪ್ರಮುಖ ಆಧ್ಯಾತ್ಮಿಕ ನಾಯಕರನ್ನು ಭೇಟಿ ಮಾಡಿದರು, "ನೀವು ದೇವರನ್ನು ನೋಡಿದ್ದೀರಾ?" ಪ್ರತಿ ಬಾರಿಯೂ ಸಮಾಧಾನಕರ ಉತ್ತರವಿಲ್ಲದೇ ಹೊರಟು ಹೋಗುತ್ತಿದ್ದ. ದಕ್ಷಿಣೇಶ್ವರ ಕಾಳಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ರಾಮಕೃಷ್ಣರ ನಿವಾಸದಲ್ಲಿ ಅವರು ಇದೇ ಪ್ರಶ್ನೆಯನ್ನು ಮುಂದಿಟ್ಟರು. ಒಂದು ಕ್ಷಣವೂ ಹಿಂಜರಿಕೆಯಿಲ್ಲದೆ ಶ್ರೀ ರಾಮಕೃಷ್ಣರು ಉತ್ತರಿಸಿದರು: "ಹೌದು, ನಾನು ಹೊಂದಿದ್ದೇನೆ. ನಾನು ನಿನ್ನನ್ನು ನೋಡುವಷ್ಟೇ ಸ್ಪಷ್ಟವಾಗಿ ದೇವರನ್ನು ನೋಡುತ್ತೇನೆ, ಆದರೆ ಹೆಚ್ಚು ಆಳವಾದ ಅರ್ಥದಲ್ಲಿ ಮಾತ್ರ." ಆರಂಭದಲ್ಲಿ ರಾಮಕೃಷ್ಣರ ಸರಳತೆಯಿಂದ ಪ್ರಭಾವಿತರಾಗದ ವಿವೇಕಾನಂದರು ರಾಮಕೃಷ್ಣರ ಉತ್ತರದಿಂದ ಬೆರಗಾದರು. ರಾಮಕೃಷ್ಣರು ತಮ್ಮ ತಾಳ್ಮೆ ಮತ್ತು ಪ್ರೀತಿಯಿಂದ ಈ ನಿರೀಶ್ವರವಾದದ ಯುವಕನನ್ನು ಕ್ರಮೇಣ ಗೆದ್ದರು. ನರೇಂದ್ರನಾಥರು ದಕ್ಷಿಣೇಶ್ವರಕ್ಕೆ ಭೇಟಿ ನೀಡಿದಷ್ಟೂ ಅವರ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿತ್ತು 1885 ರ ಮಧ್ಯದಲ್ಲಿ, ಗಂಟಲು ಕ್ಯಾನ್ಸರನಿಂದ ಬಳಲುತ್ತಿದ್ದ ರಾಮಕೃಷ್ಣ ಪರಮಹಂಸರು ತೀವ್ರವಾಗಿ ಅನಾರೋಗ್ಯಕ್ಕೆ ಒಳಗಾದರು. ಸೆಪ್ಟೆಂಬರ್ 1885 ರಲ್ಲಿ ಶ್ರೀ ರಾಮಕೃಷ್ಣರನ್ನು ಕಲ್ಕತ್ತಾದ ಶ್ಯಾಮಪುಕೂರಗೆ ಸ್ಥಳಾಂತರಿಸಲಾಯಿತು. ಇಲ್ಲಿ ನರೇಂದ್ರರು ಶ್ರೀರಾಮಕೃಷ್ಣರ ಕಟ್ಟಾ ಅನುಯಾಯಿಗಳಾಗಿದ್ದ ಯುವಜನರ ಗುಂಪನ್ನು ರಚಿಸಿದರು ಮತ್ತು ತಮ್ಮ ಗುರುಗಳಿಗೆ ಶ್ರದ್ಧಾಪೂರ್ವಕ ಕಾಳಜಿಯಿಂದ ಶುಶ್ರೂಷೆ ಮಾಡಿದರು. 16 ಆಗಸ್ಟ್ 1886 ರಂದು ಶ್ರೀ ರಾಮಕೃಷ್ಣರು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದರು.

ಶ್ರೀ ರಾಮಕೃಷ್ಣರ ನಿಧನದ ನಂತರ, ನರೇಂದ್ರನಾಥರು ಸೇರಿದಂತೆ ಅವರ ಸುಮಾರು ಹದಿನೈದು ಶಿಷ್ಯರು ಉತ್ತರ ಕಲ್ಕತ್ತಾದ ಬಾರಾನಗರದಲ್ಲಿ ಶಿಥಿಲಗೊಂಡ ಕಟ್ಟಡದಲ್ಲಿ ಒಟ್ಟಿಗೆ ವಾಸಿಸಲು ಪ್ರಾರಂಭಿಸಿದರು, ಇದನ್ನು ರಾಮಕೃಷ್ಣ ಮಠ ಎಂದು ಹೆಸರಿಸಲಾಯಿತು ಇದುವೇ ರಾಮಕೃಷ್ಣರ ಸನ್ಯಾಸಿಗಳ ವಾಸಸ್ಥಳ. 1887 ರಲ್ಲಿ ಅವರು ಔಪಚಾರಿಕವಾಗಿ ಪ್ರಪಂಚದ ಎಲ್ಲಾ ಸಂಬಂಧಗಳನ್ನು ತ್ಯಜಿಸಿದರು ಮತ್ತು



ವಿವೇಕಾನಂದರಾಗಿ ಹೊರಹೊಮ್ಮಿದರು. ವಿವೇಕಾನಂದ ಅಂದರೆ "ವಿವೇಚನಾಶೀಲ ಬುದ್ಧಿವಂತಿಕೆಯ ಆನಂದ".

ಪವಿತ್ರ ಭಿಕ್ಷಾಟನೆ ಅಥವಾ 'ಮಧುಕರಿ', ಯೋಗ ಮತ್ತು ಧ್ಯಾನದ ಸಮಯದಲ್ಲಿ ಪೋಷಕರು ಸ್ವಯಂಪ್ರೇರಣೆಯಿಂದ ದಾನ ಮಾಡಿದ ಭಿಕ್ಷೆಯಿಂದ ರಾಮಕೃಷ್ಣ ಮಠದ ಸಹೋದರತ್ವವು ವಾಸಿಸುತ್ತಿತ್ತು. ವಿವೇಕಾನಂದರು 1886ರಲ್ಲಿ ಮಠವನ್ನು ತೊರೆದು 'ಪರಿವ್ರಾಜಕ'ರಾಗಿ ಕಾಲ್ನಡಿಗೆಯಲ್ಲಿ ಭಾರತ ಪ್ರವಾಸ ಕೈಗೊಂಡರು. ಅವರು ದೇಶದಾದ್ಯಂತ ಪ್ರಯಾಣಿಸಿದರು, ಅವರ ಸಂಪರ್ಕಕ್ಕೆ ಬಂದ ಜನರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳನ್ನು ಗಮನಿಸುತ್ತಿದ್ದ ಅವರು ಸಾಮಾನ್ಯ ಜನರು ಎದುರಿಸುತ್ತಿರುವ ಜೀವನದ ಪ್ರತಿಕೂಲತೆಗಳನ್ನು, ಅವರ ಕಾಯಿಲೆಗಳನ್ನು ವೀಕ್ಷಿಸಿದರು ಮತ್ತು ಈ ದುಃಖಗಳಿಗೆ ಪರಿಹಾರವನ್ನು ತರಲು ತಮ್ಮ ಜೀವನವನ್ನು ಮುಡಿಪಾಗಿಡಲು ಪ್ರತಿಜ್ಞೆ ಮಾಡಿದರು.

ಪರಿವ್ರಾಜಕರಾಗಿ ಅಲೆದಾಡುವ ಸಮಯದಲ್ಲಿ, ಅವರು 1893 ರಲ್ಲಿ ಅಮೆರಿಕದ ಚಿಕಾಗೋದಲ್ಲಿ ವಿಶ್ವ ಧರ್ಮ ಸಂಸತ್ತಿನ ಬಗ್ಗೆ ತಿಳಿದುಕೊಂಡವರು ಆ ಸಭೆಗೆ ಹಾಜರಾಗಲು ಉತ್ಸುಕರಾಗಿದ್ದರು, ಭಾರತ, ಹಿಂದೂ ಧರ್ಮ ಮತ್ತು ಅವರ ಗುರು ಶ್ರೀ ರಾಮಕೃಷ್ಣರ ತತ್ವಗಳನ್ನು ಪ್ರತಿನಿಧಿಸಿದರು.. ಅವರು ಭಾರತದ ದಕ್ಷಿಣದ ತುದಿಯಾದ ಕನ್ಯಾಕುಮಾರಿಯ ಬಂಡೆಗಳ ಮೇಲೆ ಧ್ಯಾನ ಮಾಡುತ್ತಿದ್ದಾಗ ಅವರು ತಮ್ಮ ಇಚ್ಛೆಯ ಪ್ರತಿಪಾದನೆಯನ್ನು ಕಂಡುಕೊಂಡ ಅವರು ಮದರಾಸಿನಲ್ಲಿ ಅವರ ಶಿಷ್ಯರಿಂದ ವಿದೇಶ ಯಾತ್ರೆಗೆ ಹೋಗಲು ಹಣವನ್ನು ಸಂಗ್ರಹ ಮಾಡಿಸಿದರು ಮತ್ತು ಖೇತ್ರಿಯ ರಾಜರಾದ.. ಮಹಾರಾಜ ಅಜಿತ್ ಸಿಂಗ್ ಅವರೊಂದಿಗೆ ವಿವೇಕಾನಂದರು ಮೇ



**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ, ಗದಗ**

31, 1893 ರಂದು ಮುಂಬೈಯಿಂದ ಚಿಕಾಗೋಗೆ ತೆರಳಿದರು.

ಅವರು ಚಿಕಾಗೋಗೆ ಹೋಗುವ ದಾರಿಯಲ್ಲಿ ದುಸ್ತರ ಕಷ್ಟಗಳನ್ನು ಎದುರಿಸಿದರು, ಆದರೆ ಅವರ ಆತ್ಮಗಳು ಎಂದಿನಂತೆ ಅದಮ್ಯವಾಗಿ ಉಳಿಯಿತು. 11 ಸೆಪ್ಟೆಂಬರ್ 1893 ರಂದು ವಿಶ್ವಧರ್ಮ ಸಮ್ಮೇಳನದಲ್ಲಿ ಅವರು ವೇದಿಕೆಯನ್ನು ಪಡೆದರು ಮತ್ತು "ಅಮೆರಿಕದ ನನ್ನ ಸಹೋದರರು ಮತ್ತು ಸಹೋದರಿಯರೇ" ಎಂಬ ಆರಂಭಿಕ ಸಾಲಿನಿಂದಲೆ ಎಲ್ಲರನ್ನು ದಿಗ್ಭ್ರಮೆಗೊಳಿಸಿದರು. ಆರಂಭದ ಪದಗುಚ್ಛಕ್ಕೆ ಸಭಿಕರಿಂದ ಚಪ್ಪಾಳೆ ತಟ್ಟಿದರು. ನಂತರ ಅವರು ವೇದಾಂತದ ತತ್ವಗಳನ್ನು ಮತ್ತು ಅವುಗಳ ಆಧ್ಯಾತ್ಮಿಕ ಮಹತ್ವವನ್ನು ವಿವರಿಸಿದರು, ಹಿಂದೂ ಧರ್ಮವನ್ನು ವಿಶ್ವ ಧರ್ಮಗಳ ನಕ್ಷೆಯಲ್ಲಿ ಇರಿಸಿದರು.

ಅವರು ಮುಂದಿನ ಎರಡೂವರೆ ವರ್ಷಗಳನ್ನು ಕಾಲ ಅಮೇರಿಕಾದ ವಿವಿಧೆಡೆ ಭಾರತೀಯ ಸಂಸ್ಕೃತಿ, ಇತಿಹಾಸಗಳ ಕುರಿತು ಪ್ರವಚನಗಳನ್ನು ನೀಡುತ್ತಾ ಕಳೆದರು ಮತ್ತು 1894 ರಲ್ಲಿ ನ್ಯೂಯಾರ್ಕ್ ನಲ್ಲಿ ವೇದಾಂತ ಸೊಸೈಟಿಯನ್ನು ಸ್ಥಾಪಿಸಿದರು. ಅವರು ಪಶ್ಚಿಮ ಜಗತ್ತಿಗೆ ವೇದಾಂತ ಮತ್ತು ಹಿಂದೂ ಆಧ್ಯಾತ್ಮಿಕತೆಯ ತತ್ವಗಳನ್ನು ಬೋಧಿಸಲು ಯುನೈಟೆಡ್ ಕಿಂಗ್‌ಡಮ್‌ಗೆ ಪ್ರಯಾಣಿಸಿದರು.

ವಿವೇಕಾನಂದರು 1897 ರಲ್ಲಿ ಭಾರತಕ್ಕೆ ಮರಳಿದರು, ಸಾಮಾನ್ಯ ಮತ್ತು ರಾಜಮನೆತನದವರ ಆತ್ಮೀಯ ಸ್ವಾಗತದ ನಡುವೆ ಅವರು ದೇಶಾದ್ಯಂತ ಉಪನ್ಯಾಸಗಳ ಸರಣಿಯ ನಂತರ ಕಲ್ಕತ್ತಾವನ್ನು ತಲುಪಿದರು ಮತ್ತು ಮೇ 1, 1897 ರಂದು ಕಲ್ಕತ್ತಾ ಬಳಿಯ ಬೇಲೂರು ಮಠದಲ್ಲಿ ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಿದರು. ರಾಮಕೃಷ್ಣ ಮಿಷನ್‌ನ ಗುರಿಗಳು ಕರ್ಮ ಯೋಗದ ಆದರ್ಶಗಳನ್ನು ಆಧರಿಸಿವೆ ಮತ್ತು ದೇಶದ ಬಡ ಮತ್ತು ಸಂಕಷ್ಟದಲ್ಲಿರುವ ಜನರಿಗೆ ಸೇವೆ ಸಲ್ಲಿಸುವುದು ಇದರ ಪ್ರಾಥಮಿಕ ಉದ್ದೇಶವಾಗಿತ್ತು. ರಾಮಕೃಷ್ಣ ಮಿಷನ್ ವಿವಿಧ ರೀತಿಯ ಸಾಮಾಜಿಕ ಸೇವೆಯನ್ನು ಕೈಗೊಂಡಿದೆ, ಉದಾಹರಣೆಗೆ ಶಾಲೆಗಳು, ಕಾಲೇಜುಗಳು, ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸುವುದು ಮತ್ತು ನಡೆಸುವುದು, ಸಮ್ಮೇಳನ, ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳ ಮೂಲಕ ವೇದಾಂತದ ಪ್ರಾಯೋಗಿಕ ತತ್ವಗಳ ಪ್ರಚಾರ, ದೇಶಾದ್ಯಂತ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಪ್ರಾರಂಭಿಸುವುದು. ರಾಜಯೋಗ, ಕರ್ಮ ಯೋಗ, ಭಕ್ತಿ ಯೋಗ ಮತ್ತು ಜ್ಞಾನ ಯೋಗಗಳ ಕುರಿತಾದ ಕೃತಿಗಳನ್ನು ಅವರು ರಚಿಸಿದರು

ಅವರ ಧಾರ್ಮಿಕ ಆತ್ಮಸಾಕ್ಷಿಯು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಬೋಧನೆಗಳು ಮತ್ತು ಅದ್ವೈತ ವೇದಾಂತ ತತ್ತ್ವಶಾಸ್ತ್ರದ ಸಂಯೋಜನೆಯಾಗಿದೆ. ನಿಸ್ವಾರ್ಥ ಕೆಲಸ, ಪೂಜೆ, ಮಾನಸಿಕ ಶಿಸ್ತು ಕೈಗೊಳ್ಳುವ ಮೂಲಕ ಆತ್ಮದ ದಿವ್ಯತೆಯನ್ನು ಸಾಧಿಸುವಂತೆ ಯುವ ಜನಾಂಗಕ್ಕೆ ಅವರು ನಿರ್ದೇಶನ ನೀಡಿದರು. ವಿವೇಕಾನಂದರ ಪ್ರಕಾರ, ಆತ್ಮದ ಸ್ವಾತಂತ್ರ್ಯವನ್ನು ಸಾಧಿಸುವುದು ವ್ಯಕ್ತಿಯೋರ್ವನ ಅಂತಿಮ ಗುರಿಯಾಗಿದೆ ಮತ್ತು ಅದು ಒಬ್ಬರ ಧರ್ಮದ ಸಂಪೂರ್ಣತೆಯನ್ನು ಒಳಗೊಳ್ಳುತ್ತದೆ.

ಸ್ವಾಮಿ ವಿವೇಕಾನಂದರು ಪ್ರಮುಖ ರಾಷ್ಟ್ರೀಯತಾವಾದಿಯಾಗಿದ್ದರು. ಮತ್ತು ಅವರ ಮನಸ್ಸಿನಲ್ಲಿ ತಮ್ಮ ದೇಶವಾಸಿಗಳ ಒಟ್ಟಾರೆ ಕಲ್ಯಾಣವನ್ನು ಹೊಂದಿದ್ದರು. "ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿಯನ್ನು ತಲುಪುವವರೆಗೆ ನಿಲ್ಲಬೇಡಿ" ಎಂದು ಅವರು ತಮ್ಮ ದೇಶವಾಸಿಗಳನ್ನು ಒತ್ತಾಯಿಸಿದರು.

ಸ್ವಾಮಿ ವಿವೇಕಾನಂದರು ಅಲ್ಪಾಯುಷಿಗಳು. ಜುಲೈ 4, 1902 ರಂದು, ಅವರು ಬೇಲೂರು ಮಠದಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕೃತ ವ್ಯಾಕರಣ ಪಾಠ ಮಾಡಿದ ಅವರು ಸಂಜೆ ತಮ್ಮ ಕೋಣೆಗೆ ಮರಳಿದರು ಮತ್ತು ಸುಮಾರು 9 ಗಂಟೆಗೆ ಧ್ಯಾನದ ಸಮಯದಲ್ಲಿ ನಿಧನರಾದರು. ಅವರು 'ಮಹಾಸಮಾಧಿ' ಪಡೆದರು ಮತ್ತು ಮಹಾನ್ ಸಂತನನ್ನು ಗಂಗಾ ನದಿಯ ದಡದಲ್ಲಿ ದಹಿಸಲಾಯಿತು ಎಂದು ಹೇಳಲಾಗುತ್ತದೆ.

ಸ್ವಾಮಿ ವಿವೇಕಾನಂದರು ಒಂದು ರಾಷ್ಟ್ರವಾಗಿ ಭಾರತದ ಏಕತೆಯ ನಿಜವಾದ ಅಡಿಪಾಯವನ್ನು ಜಗತ್ತಿಗೆ ಬಹಿರಂಗಪಡಿಸಿದರು. ಅಂತಹ ವಿಶಾಲವಾದ ವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರವನ್ನು ಮಾನವೀಯತೆ ಮತ್ತು ಸಹೋದರತ್ವದ ಭಾವನೆಯಿಂದ ಹೇಗೆ ಬಂಧಿಸಬಹುದು ಎಂಬುದನ್ನು ಅವರು ಕಲಿಸಿದರು. ವಿವೇಕಾನಂದರು ಪಾಶ್ಚಿಮಾತ್ಯ ಸಂಸ್ಕೃತಿಯ ನ್ಯೂನತೆಗಳ ಅಂಶಗಳನ್ನು ಮತ್ತು ಅವುಗಳನ್ನು ನಿವಾರಿಸಲು ಭಾರತದ ಕೊಡುಗೆಯನ್ನು ಒತ್ತಿ ಹೇಳಿದ್ದಾರೆ.

ನೇತಾಜಿ ಸುಭಾಷ್ ಚಂದ್ರ ಬೋಸ್ ಒಮ್ಮೆ ಹೇಳಿದರು: "ಸ್ವಾಮಿ ವಿವೇಕಾನಂದರು ಪೂರ್ವ ಮತ್ತು ಪಶ್ಚಿಮ, ಧರ್ಮ ಮತ್ತು ವಿಜ್ಞಾನ, ಹಿಂದಿನ ಮತ್ತು ವರ್ತಮಾನವನ್ನು ಸಮನ್ವಯಗೊಳಿಸಿದವರು ಮತ್ತು ಅದಕ್ಕಾಗಿಯೇ ಅವರು ಶ್ರೇಷ್ಠರಾಗಿದ್ದಾರೆ. ನಮ್ಮ ದೇಶವಾಸಿಗಳು ಅವರ ಅಭೂತಪೂರ್ವ ಸ್ವಾಭಿಮಾನ,ಸ್ವಾವಲಂಬನೆಮತ್ತುಸ್ವಾವಲಂಬನೆಯನ್ನು ಗಳಿಸಿದ್ದಾರೆ. ಬೋಧನೆಗಳು." ವಿವೇಕಾನಂದರು ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಯ ನಡುವೆ ಸೇತುವೆಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದರು. ಅವರು ಪಾಶ್ಚಿಮಾತ್ಯ ಜನರಿಗೆ ಹಿಂದೂ ಧರ್ಮಗ್ರಂಥಗಳು, ತತ್ವಶಾಸ್ತ್ರ ಮತ್ತು ಜೀವನ ವಿಧಾನವನ್ನು ಅರ್ಥೈಸಿದರು. ಬಡತನ ಮತ್ತು ಹಿಂದುಳಿದಿರುವಿಕೆಯ ನಡುವೆಯೂ ಅವರು ಅವರಿಗೆ ಅರಿವನ್ನು ಮೂಡಿಸಿದರು. ವಿಶ್ವ ಸಂಸ್ಕೃತಿಗೆ ಭಾರತವು ದೊಡ್ಡ ಕೊಡುಗೆಯನ್ನು ನೀಡಿದೆ. ಪ್ರಪಂಚದ ಇತರ ಭಾಗಗಳಿಂದ ಭಾರತದ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಕೊನೆಗೊಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.

ಅಂತೆಯೇ ಭಾರತದ ಘನ ಸರ್ಕಾರವು ಭಾರತವಷ್ಟೇ ಅಲ್ಲ ಇಡೀ ವಿಶ್ವದ ಯುವ ಜನಾಂಗಕ್ಕೆ ತನ್ನ ಅತ್ಯುತ್ತಮ ಸಂದೇಶಗಳನ್ನು ಕೊಟ್ಟ, ನುಡಿದಂತೆ ನಡೆದ, ವಿಶ್ವದ ಎಲ್ಲೆಡೆ ಭಾರತದ ಕೀರ್ತಿಯನ್ನು ಪಸರಿಸಿದ ಭಾರತದ ಹಿಂದೂ ಪರಂಪರೆಯ ಆಳ ಅಗಲ ಹಿರಿಮೆ ಗರಿಮೆಗಳನ್ನು ಜಗತ್ತಿಗೆ ತೋರ್ಪಡಿಸಿದ ಸಿಡಿಲ ಸನ್ಯಾಸಿ ಎಂದೇ ಹೆಸರಾದ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು *ರಾಷ್ಟ್ರೀಯ ಯುವ ದಿನ*ವನ್ನಾಗಿ ಆಚರಿಸಲಾಗುತ್ತಿದೆ. ಅವರ ಆದರ್ಶಗಳನ್ನು ನಮ್ಮ ಬಾಳಿನಲ್ಲಿ ಪಾಲಿಸುವ ಪ್ರತಿಜ್ಞೆಯನ್ನು ಈ ಯುವ ದಿನದಂದು ನಾವೆಲ್ಲರೂ ಕೈಗೊಂಡು ಅದರಂತೆಯೇ ನಡೆಯೋಣ ಎಂಬ ಆಶಯದೊಂದಿಗೆ

## ಕವಿ ಮನಸು

### ಬರ್ತಾನೇನು ನೋಡಾಕ



ಬೇಯ್ಲಿಕೇನು ಇಟ್ಟೇಯವ್ವ
ಒಲೆಯ ಮ್ಯಾಗೆ
ಅಕ್ಕೀ ತುಂಬಿ ಇಟ್ಟೇಯೇನು
ಪಾತ್ರೇನಾಗೆ

ಊಟಕ್ಕೆಂದು ಬಂದಾರೇನು
ಹಸಿವಿನಾಗೆ
ತಟ್ಟೇ ಇಟ್ಕೊಂಡ್ ಕೂತವ್ರೇನು
ಸಾಲಿನಾಗೆ

ಸೌದೆ ತುಂಡು ಇಟ್ಟೇಯಲ್ಲ
ಒಲೆಯ ಒಳಗೆ
ಏನು ಯೋಚ್ನೆ, ಉರಿಯ ಹಚ್ಚು
ಉರಿಸು ಕಟ್ಗೆ

ರೇಷ್ಮೆ ಲಂಗ ಕೆಂಪು ರವಿಕೆ
ಯಾಕ ಈಗ?
ಮಲ್ಲೆ ಮಾಲೆ ಇಟ್ಟೆಯಲ್ಲೆ
ತುರುಬಿನಾಗ

ನೋಡಕಂತ ಬರ್ತಾನೇನು
ಪ್ಯಾಟೆ ಹುಡುಗ
ನಿನ್ನ ನೋಡಿ ಹೇಳ್ತಾನವನು
ಬಾರೆ ಬೇಗ॥


– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಮುಚ್ಚಿಡುವುದು

ವಾದ ವಿವಾದಗಳು
ಜಟಲ ಸಮಸ್ಯೆಗಳು
ಭ್ರಷ್ಟಾಚಾರಗಳು
ಕೆಲವು ಮಂದಿಗೆ
ವಿಧ ವಿಧ ಉಪ್ಪಿನಕಾಯಿ,
ಹಪ್ಪಳ ಸಂಡಿಗೆ ಇದ್ದಂತೆ
ಬಾಯಿ ಚಪ್ಪರಿಸಿ,
ಸ್ವಾದ ನೋಡುವರು,
ನಾಳಿಗೊಂದಷ್ಟು ಇರಲೆಂದು,
ಭರಣಿಯಲ್ಲಿ ಮುಚ್ಚಿಡುವುದು.

– ಚಂದ್ರಶೇಖರಯ್ಯ, ರೋಣದಮಠ

### ತುಂಗಭದ್ರಾ ನೀರಿನ ಮಟ್ಟ



| ಗುರುವಾರ : 11-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.98 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.198 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1622.21 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8099 ಕ್ಯುಸೆಕ್ |
| ಸಾಮರ್ಥ್ಯ | 67.746 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ಬೀದಿಯಲ್ಲಿ ಸಾಹಿತ್ಯ

.......ಮುಂದುವರೆದ ಭಾಗ

# ನಮ್ಮ ಓನರ್ ಬಡವ !

ದೂರದವರೆಗೆ ಚಲಿಸುವ ಬಸ್ಸು–ಲಾರಿಗಳ ಮೇಲೆ ಹೀಗೆ ವೈಯಕ್ತಿಕ ನೆಲೆಯ ಸಾಹಿತ್ಯ ಇರುವುದಿಲ್ಲ. 'ಮೇರಾ ಭಾರತ್ ಮಹಾನ್' 'ಕನ್ನಡ ಕಲ್ಪವೃಕ್ಷ ಕರ್ನಾಟಕ ಕಾಮಧೇನು' 'ಕನ್ನಡವೆ ಸತ್ಯ ಕನ್ನಡವೇ ನಿತ್ಯ' 'ಕೊಲ್ಲದಿರಿ ಅಂತರ್ಜಲ ಕುಡಿಯಿರಿ ಶುದ್ಧಜಲ' ಇತ್ಯಾದಿ ದೇಶಪ್ರೇಮದ ನುಡಿಗಳಿರುತ್ತವೆ. ನಾವು ಚಿಕ್ಕವರಿದ್ದಾಗ 'ಮಾತು ಕಡಿಮೆ–ದುಡಿಮೆ ಹೆಚ್ಚು' 'ಒಂದು ಎರಡು ಬೇಕು–ಮೂರು ಮಕ್ಕಳು ಸಾಕು' ಎಂಬ ವಾಕ್ಯಗಳು ಎಲ್ಲಿ ಬೇಕಲ್ಲಿ ಕಾಣಸಿಗುತ್ತಿದ್ದವು. ಅವುಗಳ ಜಾಗದಲ್ಲಿ ಈಗ ಜಲ ಉಳಿಸುವ, ದೇಶವನ್ನು ಸ್ವಚ್ಛವಾಗಿಡುವ ಸಂದೇಶಗಳು ಬಂದಿವೆ. ಆದರೂ ಮಕ್ಕಳನ್ನು ನಿಯಂತ್ರಿಸಲು ಸೂಚಿಸುವ ಬರೆಹವು ತಮ್ಮ ಕಾಲಿಗೆ ತಾವೇ ಕೊಡಲಿ ಹೊಡೆದುಕೊಳ್ಳುವ ಬಗೆಯವು ಎಂದು ನನ್ನ ಅಭಿಮತ. ಈಗಿನ ಮಕ್ಕಳೇ ಮುಂದಿನ ಪಯಣಿಕರು. ಬಸ್ಸುರೈಲಿಗೆ ಹತ್ತುವುದಕ್ಕೆ ಜನವಿಲ್ಲದೆ ಹೋದಾರು ಎಂಬ ನದರು ಬೇಡವೇ? ಇಂತಹ ಬರೆಹಗಳನ್ನು ರಚಿಸಲು ಸರ್ಕಾರವೇ ಒತ್ತಡ ಹೇರುವುದುಂಟು. ಎಮರ್ಜನ್ಸಿಯಲ್ಲಿ 'ಭಾರತ ಮುನ್ನಡೆದಿದೆ' ಎಂದು ವಾಹನಗಳ ಮೇಲೆ ಬರೆಯಬೇಕೆಂದು ಹುಕುಂ ಹೊರಡಿಸಲಾಗಿತ್ತು. ಆದರೆ ತುರ್ತುಪರಿಸ್ಥಿತಿ ವಿರೋಧಿ ಕವಿಯೊಬ್ಬರು, ಈ ಬರೆಹವನ್ನೇ ಆಧಾರವಾಗಿಟ್ಟುಕೊಂಡು 'ಕೆಟ್ಟುನಿಂತ ಟ್ರಕ್ಕಿನಮೇಲೂ ಭಾರತ ಮುನ್ನಡೆದಿದೆ' ಎಂಬ ರೂಪಕವನ್ನು ಮಾಡಿ ಕವಿತೆ ಬರೆದುಬಿಟ್ಟರು. ಬೀದಿಸಾಹಿತ್ಯವು ಚಳುವಳಿ ಸಾಹಿತ್ಯಕ್ಕೆ ಪ್ರೇರಣೆ ಕೊಟ್ಟಿತು.

ವಾಹನ ಸಾಹಿತ್ಯದಲ್ಲಿ ಒಳಸಾಹಿತ್ಯ ಹೊರಸಾಹಿತ್ಯ ಎಂದು ಎರಡು ಭಾಗ ಮಾಡಬಹುದು. ಒಳಸಾಹಿತ್ಯ ಹೆಚ್ಚಾನೆಚ್ಚು ನೀತಿಕೇಂದ್ರಿತ. ಯಾರೊ ಸಾಹಿತ್ಯಪ್ರೇಮಿ ಅಧಿಕಾರಿಯ ಕೈವಾಡದಿಂದ ಕನ್ನಡ ಕಾವ್ಯವೇ ಬಸ್ಸಿನೊಳಗೆ ನುಸುಳಿದೆ. 'ಹೆಮ್ಮೆಯ ನಗೆಯಿರಲಿ, ಹಮ್ಮಿನ ನಗೆಬೇಡ' 'ನಿಮಗೆ ನೀವೇ ದಾರಿದೀಪಗಳು' ಇತ್ಯಾದಿ. ಆದರೆ ಡಿವಿಜಿಯವರ 'ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು, ಹರುಷಕ್ಕಿದೆ ದಾರಿ' ಎಂಬ ಕಗ್ಗದ ಅರ್ಥ ನನಗಿನ್ನೂ ಸ್ಪಷ್ಟವಾಗಿಲ್ಲ. ಪಯಣಿಕರೂ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ನಾನಂತೂ 'ಸಿಕ್ಕ ಮೊದಲ ಬಸ್ಸು ಹತ್ತು. ಎರಡನೆಯದು ಬರುವ ನಂಬಿಕೆಯಿಲ್ಲ' ಎಂಬ ಅರ್ಥದಲ್ಲೇ ಇದನ್ನುಗ್ರಹಿಸಿದ್ದೇನೆ. ಜೀವನದಲ್ಲಿ ಈ ತತ್ವವನ್ನು ಪಾಲಿಸಿಕೊಂಡು ಬಂದಿದ್ದೇನೆ ಕೂಡ.

ಸಮಸ್ಯೆಯೆಂದರೆ, ಬೀದಿಸಾಹಿತ್ಯದ ಎಚ್ಚರಿಕೆ ನೀತಿಸಂದೇಶಗಳಿಗೆ ಅನುಷ್ಠಾನಕ್ಕಿಂತ ಉಲ್ಲಂಘನೆಯೇ ಹೆಚ್ಚು. ಮೊದಲಿಗೆ, ಇದು ಮೂತ್ರ ಮಾಡುವ ಜಾಗವಲ್ಲ. ದಯವಿಟ್ಟು ಉಗುಳಬೇಡಿ, ಗೇಟಿನಮುಂದೆ ವಾಹನ ನಿಲ್ಲಿಸಬೇಡಿ– ಎಂಬ ವಿನಂತಿಗಳಿಂದ ಶುರುವಾಗುತ್ತವೆ. ಬಳಿಕ ದಂಡವಿಧಿಸುವ ಅಪರಾಧ ಮತ್ತು ಶಿಕ್ಷೆಯ ವಿನ್ಯಾಸಕ್ಕೆ ನೆಗೆಯುತ್ತವೆ. 'ಕಸ ಹಾಕಬೇಡಿ. ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ' 'ಕಸ ಹಾಕಿದರೆ 500 ರೂ ದಂಡ' ಸೂಚನೆಗೆ ಜನ ಸೊಪ್ಪು ಹಾಕುವುದಿಲ್ಲ. ಸಾಮ ಭೇದಗಳು ಶೋಚನೀಯವಾಗಿ ಸೋತ ಬಳಿಕ ಭಾಷೆ ಮತ್ತು ಒಕ್ಕಣೆ ನಾಟಕೀಯವಾಗಿ ಬದಲುತ್ತವೆ: ಈಚೆಗೆ 'ಇಲ್ಲಿ ಕಸಹಾಕಿದವರು ..ಮಕ್ಕಳು' ಎಂಬ ಫಲಕ ನೋಡಿದೆ. ಅಲ್ಲಿ ಸೋತವರ ಅಸಹಾಯಕತೆಯೂ ಕಂಡಿತು. ಕನ್ನಡ ಶಾಸನಗಳಲ್ಲಿ ಮೊದಮೊದಲು ದಾನಕೊಟ್ಟ ಭೂಮಿಯನ್ನು ರಕ್ಷಿಸಲು ವಿನಂತಿಸುವ, ಅದನ್ನು ಕದ್ದವರನ್ನು ಶಿಕ್ಷಿಸುವ ಸಾಲುಗಳಿದ್ದವು. ಬಳಿಕ ಭೂಗಳ್ಳರು ಹೆಚ್ಚಾದರೆಂದು ಕಾಣುತ್ತದೆ, ಅವರನ್ನು ಆಕ್ರೋಶದಲ್ಲಿ ಬೈಯ್ಯುವ ಶಾಪಾಶಯಗಳು ಕಿಕ್ಕಿರಿದವು.

ನಿಯಮವನ್ನು ಮುರಿಯುವುದು, ನಿಷೇಧಿಸಿದ್ದನ್ನು ಶಿಕ್ಷೆಯ ಭಯವಿಲ್ಲದೆ ಉಲ್ಲಂಘಿಸುವುದು ಜನರ ನಿರಂಕುಶಮತಿಯ ಗುಣ. ಧೂಮಪಾನಿಗಳು ಕ್ಯಾನ್ಸರ್ ಎಚ್ಚರಿಕೆಯನ್ನು ಓದಿಕೊಂಡೇ ಸಿಗರೇಟು ಪ್ಯಾಕನ್ನು ಬಿಚ್ಚುತ್ತಾರೆ. ಬಸ್ಸಿಗೆ ಏರುವವರು 'ಸಾಲಾಗಿ ಬನ್ನಿರಿ' ಬರೆಹವನ್ನು ಉಜ್ಜಿಕೊಂಡೇ ನುಗ್ಗುತ್ತಾರೆ. ಇಳಿಯುವವರ ಬ್ಯಾಗು ಹತ್ತುವವವರ ಕಂಕುಳಿಗೆ ಸಿಕ್ಕಿಕೊಳ್ಳುತ್ತದೆ. "ಹೊಟ್ಟೆಗೆ ಏನ್ ತಿಂತೀರಪ್ಪ. ಇಳಿಯೋರಿಗೆ ಜಾಗ ಬಿಡಿ. ಹೆಂಗಸರಿದ್ದಾರೆ ಅಂತ ಗೊತ್ತಾಗಲ್ಲವಾ?" ಎಂದು ಗೊಣಗಾಟ ಬರುತ್ತದೆ. ಯಾರೂ ಲೆಕ್ಕಿಸುವರು? ಸೀಟುಗಳನ್ನು ಮಹಿಳೆಯರಿಗೆ, ಅಂಗವಿಕಲರಿಗೆ ಹಿರಿಯ ನಾಗರಿಕರಿಗೆ ಮೀಸಲಿಟ್ಟ ಬರೆಹ ಅಥವಾ ಚಿಲ್ಲರೆ ಕೊಟ್ಟು ಸಹಕರಿಸಿ ಮೊದಲಾದ ವಿನಂತಿಗಳ ಪಾಡಂತೂ ಕೇಳಬಾರದು. ಈಚೆಗೆ ಒಂದು ಬಸ್ಸಿನಲ್ಲಿ ಗೌರವ ಕೊಟ್ಟು ಗೌರವ ಪಡೆಯಿರಿ ಎಂಬ ಸಾಲನ್ನು ಕಂಡೆ. ಬಹುಶಃ ಕಂಡಕ್ಟರೇ ಮುದ್ದಾಮಾಗಿ ಬರೆಸಿರಬೇಕು. ಯಾಕೆಂದರೆ ಅದು ಸಂಜೆ ಪಟ್ಟಣದಿಂದ ಎಣ್ಣೆಹಾಕಿದ ಹಳ್ಳಿಗರನ್ನು ತುಂಬಿಕೊಂಡು ಮರಳುವ ಬಸ್ಸಾಗಿತ್ತು.

ಈಚೆಗೆ ವಾಹನಗಳಲ್ಲಿ ಬರೆಹಗಳ ಬದಲು ಸ್ಟಿಕರುಗಳು ಆಗಮಿಸುತ್ತಿವೆ. ನೀವು ಮದ್ಯಪಾನ ಬಿಡಬೇಕೆ ಅಥವಾ ಬಿಡಿಸಬೇಕೇ? ಕೇವಲ 15 ದಿನ ಸಾಕು; ಒಂದು ವಾರದಲ್ಲೇ ಸ್ಪೋಕನ್ ಇಂಗ್ಲಿಶ್ ಕಲಿಸುತ್ತೇವೆ ಇತ್ಯಾದಿ ಪ್ರಲೋಭನೆ ಅದೆ. ಅದೇಕೊ ಹೊಸಪೇಟೆ ಕಡೆಯ ಬಸ್ಸುಗಳಲ್ಲಿ ಜ್ಯೋತಿಷ್ಯದ ಜಾಹಿರಾತು ಸ್ಟಿಕರುಗಳು ಹೆಚ್ಚು. ಈ ಮಾಂತ್ರಿಕ ಜ್ಯೋತಿಷಿಗಳು ಬಗೆಹರಿಸುವ





**ರಹಮತ್ ತರೀಕೆರೆ**
ಸಂಸ್ಕೃತಿ ಚಿಂತಕರು

ಸಮಸ್ಯೆಗಳ ಪಟ್ಟಿಯಲ್ಲಿ 'ಸ್ತ್ರೀಪುರುಷ ವಶೀಕರಣಕ್ಕೆ ಗಂಧರ್ವ ಸಂಮೋಹಿನಿ ಯಂತ್ರ'ದ ಆಶ್ವಾಸನೆಯೂ ಸೇರಿದೆ. ಉಚಿತ ಪಾಸನ್ನು ಪಡೆದು ಬಾಗಿಲಿಗೆ ನೇತುಬಿದ್ದು ಪಯಣಸುವ ಕಾಲೇಜು ಹುಡುಗರು, ಈ ಯಂತ್ರ ಕಟ್ಟಿಕೊಂಡು ಸಂಮೋಹನ ಮಾಡುವ ಶೋಚನೀಯ ಸ್ಥಿತಿಗಿನ್ನೂ ತಲುಪಿಲ್ಲ. ಬಹುಶಃ ಇದು ಮಧ್ಯವಯಸ್ಕರನ್ನು ಮನಸ್ಸಲ್ಲಿಟ್ಟುಕೊಂಡು ಕೊಡಲಾದ ಜಾಹಿರಾತು. ಹಿಂದೆ ರಾಜಕಾರಣಿಗಳು ಉಳಿದುಕೊಳ್ಳುವ ಬೆಂಗಳೂರಿನ ಪ್ರಸಿದ್ಧ ಹೋಟೆಲುಗಳಲ್ಲಿ, ಕೋಣೆಯನ್ನು ಖಾಯಮಾಗಿ ಪಡೆದುಕೊಂಡ ಜ್ಯೋತಿಷಿಗಳ ಬೋರ್ಡು ಇರುತ್ತಿತ್ತು. ಎಲ್ಲೆಲ್ಲಿ ಆರ್ಥಿಕ ರಾಜಕೀಯ ಸಾಂಸಾರಿಕ ಅಭದ್ರತೆ ಇರುತ್ತದೆಯೊ, ಅಲ್ಲೆಲ್ಲ ಇಂತಹ ಸ್ಟಿಕರು–ಬೋರ್ಡುಗಳು ಸಹಜ ಎಂದು ಕಾಣುತ್ತದೆ.

ಹೋಟೆಲು ಅಂಗಡಿಗಳ ಬೋರ್ಡುಗಳು ನಮ್ಮ ಸಮಾಜ ವ್ಯವಸ್ಥೆಯನ್ನು ಬಿಂಬಿಸುತ್ತವೆ. ಅಂಡ್ ಸನ್ಸ್ ಎಂಬ ಒಕ್ಕಣೆಯನ್ನು ಗಮನಿಸಿ. ಮಾಲಕನಿಗೆ ಹೆಣ್ಣುಮಕ್ಕಳಿಲ್ಲ ಅಂತಲ್ಲ. ಕೊಟ್ಟಹೆಣ್ಣು ಕುಲಕ್ಕೆ ಹೊರಗಾಗಿ, ಆಸ್ತಿ ಗಂಡುಮಗನಿಗೆ ವರ್ಗಾವಣೆ ಆಗುವ ವ್ಯವಸ್ಥೆಯ ಫಲವಾಗಿ ಆ ಬೋರ್ಡುಬರೆಹ ಬಂದಿದೆ. ಒಮ್ಮೆ ಅರಣ್ಯ ಇಲಾಖೆಯವರು ರಸ್ತೆಬದಿಯಲ್ಲಿ 'ಕಾಡಿಲ್ಲದ ಊರು ಮಕ್ಕಳಿಲ್ಲದ ಬಂಜೆಯಂತೆ' ಎಂದು ಫಲಕ ನೆಟ್ಟಿದ್ದರು. ಯಾರೊ ವಾಚಕರವಾಣಿಯಲ್ಲಿ ಮಂಗಳಾರತಿ ಎತ್ತಿರಬೇಕು. ಬಳಿಕ ಅದು ಕಾಣೆಯಾಯಿತು. ಲಿಂಗಾಯತ ಖಾನಾವಳಿ, ಬ್ರಾಹ್ಮಣರ ಫಲಾಹಾರ ಮಂದಿರ ಬೋರ್ಡುಗಳು ನನಗೆ ಕುತೂಹಲ ಹುಟ್ಟಿಸುತ್ತವೆ. ಅವು ಜಾತಿಗೂ ಊಟಕ್ಕೂ ಸಂಬಂಧ ಕಲ್ಪಿಸಿವೆ. ಆದರೆ ಸತ್ಯ ಬೇರೆಯೇ ಇರುತ್ತದೆ. ಒಮ್ಮೆ ನಮ್ಮ ಬಡಾವಣೆಯ ಅಯ್ಯಂಗಾರ್ ಬೇಕರಿಯಲ್ಲಿ ವಿಚಾರಿಸಿದೆ. ಅವರು ಅಯ್ಯಂಗಾರ್ ಆಗಿರಲಿಲ್ಲ. ನಿರ್ದಿಷ್ಟ ವಸ್ತುಗಳಿಗೆ ಖ್ಯಾತವಾದ ಊರಿನ ಉಲ್ಲೇಖವಿರುವ ಬೋರ್ಡುಗಳೂ ಹೀಗೇ. ನಮ್ಮ ಕಡೆ ಶೆಟ್ಟರ ಅಂಗಡಿಗಳಲ್ಲಿ ಹೊಳೇನರಸೀಪುರದ ಬೆಣ್ಣೆ, ಅಂಬಾಮಣಿ ನಸ್ಯ, ನಂಜನಗೂಡಿನ ರಸಬಾಳೆ ಎಂಬ ಫಲಕಗಳಿದ್ದವು. ನಸ್ಯ ಮತ್ತು ಬಾಳೆ ವಿಷಯದಲ್ಲಿ ನಿಜವಿದ್ದಿರಬಹುದು. ಆದರೆ ಬೆಣ್ಣೆಯದು ಮಾತ್ರ ಪಕ್ಕಾ ಸುಳ್ಳು. ಯಾಕೆಂದರೆ ಅಂಗಡಿಗೆ ಬೆಣ್ಣೆ ಹೋಗುತ್ತಿದ್ದುದು ನನ್ನ ಸಹಪಾಠಿಯ ಮನೆಯಿಂದ. ನಮ್ಮೂರ ದನಗಳಿಗೆ ಓದು ಬರೆಹ ಬಂದಿದ್ದರೆ, ತಮ್ಮ ಉತ್ಪನ್ನಕ್ಕೆ ಪರವೂರಿಗೆ ಕ್ರೆಡಿಟ್ ಕೊಡುತ್ತಿರುವ ಬೋರ್ಡುಗಳನ್ನು ಕೊಂಬಿನಲ್ಲಿ ತಿವಿದಿರುತ್ತಿದ್ದವು. ಹೋಟೆಲ್ ಬೋರ್ಡುಗಳಲ್ಲಿ ಇನ್ನೊಂದು ಕಿರಿಕಿರಿಯಿದೆ. ಅಲ್ಲಿ ಅಕ್ಷರದ ಜತೆ ಕುರಿ ಮೀನು ಕೋಳಿಗಳ ಚಿತ್ರಗಳಿರುತ್ತವೆ. ಹುಂಜದ ಮುದ್ದಾದ ಚಿತ್ರ ಬರೆದು ಅದರ ಮೇಲೆ ಪ್ರೀತಿ ಹುಟ್ಟಿಸಿ, ಬಳಿಕ ಒಳಗೆ ಬನ್ನಿ ಅದನ್ನು ಕೊಯ್ದು ಪಲ್ಯ ಮಾಡಿದ್ದೇವೆ ಎಂದು ಸ್ವಾಗತಿಸುವುದು ಯಾಕೊ ಕಷ್ಟಕೊಡುತ್ತದೆ. ಕಂಪನಿಗಳು ರಸ್ತೆಬದಿಯ ಮನೆಗಳ ಗೋಡೆಗಳ ಮೇಲೆ ದೃಢತೆ ಬಾಳಿಕೆಯ ಸಂಕೇತವೆಂದು ತಮ್ಮ ಕಬ್ಬಿಣ ಸೀಮೆಂಟುಗಳನ್ನು ಬಣ್ಣಿಸಿರುತ್ತವೆ. ಅಲ್ಲೊಬ್ಬ ಬಾಹುಬಲಿಯ ಚಿತ್ರವೂ ಇರುತ್ತದೆ. ಆದರೆ ಬರೆಸಿಕೊಂಡ ಗೋಡೆಗಳೇ ಬಿರುಕು ಬಿಟ್ಟಿರುತ್ತವೆ. ಉತ್ತರ ಭಾರತದಲ್ಲಿ ದೊಡ್ಡ ನಗರಗಳು ಬಂದೊಡನೆ ಗೋಡೆಗಳ ಮೇಲೆ ಲೈಂಗಿಕ ರೋಗ ಗುಣಪಡಿಸುವ ವೈದ್ಯರುಗಳ ವಿಪರೀತ ಜಾಹಿರಾತುಗಳನ್ನು ನೋಡುವಾಗಲೂ, ನಾನು ವಿಚಲಿತನಾಗುತ್ತೇನೆ.

ನಾನು ಕನ್ನಡ ಶಿಕ್ಷಕನಾಗಿರುವುದರಿಂದ, ಬೀದಿಸಾಹಿತ್ಯದಲ್ಲಿ ಕಾಗುಣಿತ ದೋಷ ಎದ್ದುಕಾಣುತ್ತದೆ. ಉತ್ತರ ಭಾರತದ ಬೇಲ್‌ಪುರಿ ಗಾಡಿಯವರ ಕನ್ನಡವಂತೂ ಹೇಳಬಾರದು. ಅವರು ವ್ಯಂಜ್ಯನಗಳಿಗೆ ಮಾತ್ರವಲ್ಲ, ಸ್ವರಗಳಿಗೂ ಒತ್ತಕ್ಷರ ಕೊಡಬಲ್ಲರು. ಆಂಗ್ಲ ಸೂಚನೆಗಳನ್ನು ಕಂಪ್ಯೂಟರಿನಲ್ಲಿ ಅನುವಾದ ಮಾಡಿಸಿ ಹಾಕುತ್ತಿರುವ ಕಡೆಯಲ್ಲೂ ಇದೇ ಸಮಸ್ಯೆ ಒಂದೆಡೆ 'ಡೋಂಟ್ ಪಾಸ್ ಯೂರಿನ್ ಹಿಯರ್' ಎನ್ನುವುದನ್ನು ಕಂಪ್ಯೂಟರ್ "ಇಲ್ಲಿ ಮೂತ್ರ ಉತ್ತೀರ್ಣ ಮಾಡಬೇಡಿ" ಎಂದು ಅನುವಾದಿಸಿತ್ತು. ಒಂದು ಊರಿನ ಫಲಾನೆ ಸಂಘಟನೆಯವರು ಗೋಡೆಯ ಮೇಲೆ ಹೀಗೆ ಬರೆದಿದ್ದರು: "......ಸಂಘಟನೆ ಸೇರಿರಿ, ಹೂಸನಾಡ ಕಟ್ಟಿರಿ". ಹಾಗೆ ಕಂಡರೆ, ಬೋರ್ಡುಸಾಹಿತ್ಯ ಗೋಡೆಸಾಹಿತ್ಯದಲ್ಲಿ ವ್ಯಾಕರಣ ದೋಷ ಹುಡುಕಬಾರದು. ಪ್ರೇಮಿಗಳ ಬರೆಹದಲ್ಲಂತೂ ದೋಷ ಹುಡುಕುವುದು ಸರ್ವಥಾ ಸಲ್ಲದು. ಪ್ರೇಮಕ್ಕೆ ಭಾಷೆಯ ಹಂಗಿಲ್ಲ. ಭಾವ ಮುಖ್ಯ. ರೂಪವಲ್ಲ. ಪ್ರಾಚೀನ ಕಟ್ಟಡಗಳ ಗೋಡೆಯ ಗಾರೆಯನ್ನೊ, ಮರದ ತೊಗಟೆಯನ್ನೊ ಕೆತ್ತಿ ಪ್ರೇಮಿಗಳು ರಚಿಸಿದ ಶಾಸನಗಳನ್ನು ಗಮನಿಸಬೇಕು. ಅವನ್ನು ಬರೆಯಲಾದ ಅಥವಾ ಕೆತ್ತಲಾದ ಜಾಗ ನೋಡಿದರೆ, ಅಷ್ಟು ಎತ್ತರಕ್ಕೆ ಹೇಗಾದರೂ ಹತ್ತಿದರಪ್ಪಾ ಎಂದು ಆಶ್ಚರ್ಯವಾಗುವುದು. ಪ್ರೇಮಕ್ಕಾಗಿ ಪ್ರಾಣಕೊಡಲು ಸಿದ್ಧ ಎಂಬ ಸಂದೇಶವೂ ಅಲ್ಲಿರುತ್ತದೆ. ಗೋಲಗುಂಬಜವು ಇಂತಹ ಅಮರಪ್ರೇಮಿಗಳ ಕೆತ್ತನೆಗಳಿಂದ ತುಂಬಿಹೋಗಿದೆ. ಬದಾಮಿಯ ಗುಹೆಗಳಿರುವ ಬೆಟ್ಟದಲ್ಲಿ ಒಂದೆಡೆ ಬಂಡೆಯ ಛಾವಣಿಯಲ್ಲಿ ಜೇನು ಗೂಡನ್ನು ಕಟ್ಟಲು ಅಂಜುವ ಕಡೆಯಲ್ಲೂ ಒಬ್ಬ ಹೋಗಿ, ಪೈಂಟಿನಲ್ಲಿ ತನ್ನ ಪ್ರಿಯತಮೆಯ ಹೆಸರನ್ನು ಬರೆದಿದ್ದನು. ಪ್ರಿಯಕರನಿಗಾಗಿ ಜಾತಿ ಧರ್ಮ ಬಿಟ್ಟು ಬರಲು ಸಿದ್ಧವಿರುವ ಹುಡುಗಿಯರು, ತಮ್ಮ ಪ್ರೇಮವನ್ನು ತೋರಿಸಿಕೊಳ್ಳುವುದಕ್ಕೆ ಈ ಮಾರ್ಗ ಅನುಸರಿಸುವುದಿಲ್ಲ.

ಬೋರ್ಡು ಮತ್ತು ವಾಹನ ಸಾಹಿತ್ಯದಲ್ಲಿ ಬರೆದವರು ಜವಾಬ್ದಾರಿ ಹೊರುತ್ತಾರೆ. ಆದರೆ ಗೋಡೆ ಸಾಹಿತಿಗಳು ಅನಾಮಧೇಯರು. ಅಲ್ಲಿ ಒಬ್ಬರು ಬರೆದ ಸಾಹಿತ್ಯಕ್ಕೆ ಓದುಗರ ಪ್ರತಿಕ್ರಿಯೆಯೂ ದಾಖಲಾಗುತ್ತದೆ. ಆ ಪ್ರತಿಕ್ರಿಯೆಯ ಕೆಳಗೆ ಮತ್ತೊಬ್ಬನ ವಿಮರ್ಶೆ ಇರುತ್ತದೆ. ಇದು ಒಂದೇ ಕಚೇರಿಯ ವಿಭಿನ್ನ ಹಂತದ ಗುಮಾಸ್ತರು ಅಧಿಕಾರಿಗಳು ಟಪ್ಪಣಿ ಬರೆದ ಸರ್ಕಾರಿ ಕಡತವಾಗಿರುತ್ತದೆ. ಈ ಸಾಹಿತ್ಯದ ಬಗ್ಗೆ ನಮ್ಮೊಲ್ಲೊಬ್ಬರು ಗಂಭೀರ ಅಧ್ಯಯನ ಮಾಡಿದರು. ಅವರಿಗೆ ಡಾಕ್ಟರೇಟ್ ಪದವಿ ಸಿಕ್ಕಿತು. ಜತೆಗೆ ಟಾಯ್ಲೆಟ್ ಸಾಹಿತಿ ಎಂಬ ಬಿರುದನ್ನೂ ಹೊರಬೇಕಾಯಿತು. ಶೌಚಾಲಯ ಸಾಹಿತ್ಯವು ಲೈಂಗಿಕತೆ ಬಗ್ಗೆ ಅನಗತ್ಯವಾದ ನಿಗೂಢತೆ ನಿಷೇಧ ಸೃಷ್ಟಿಸಿ ಮುಚ್ಚಿಟ್ಟದ್ದರ ಪರಿಣಾಮ; ಇದು ಸಮಾಜದಲ್ಲಿ ಯುವಜನರ ಸುಪ್ತ ಮನೋಲೋಕದ ಒಳಗಿರುವ ಕೋಲಾಹಲವನ್ನು ಬಿಂಬಿಸುತ್ತಿದೆ. ಅವರಿಗೆ ಜರೂರಾಗಿ ಲೈಂಗಿಕ ಶಿಕ್ಷಣದ ಅಗತ್ಯವಿದೆ ಎಂದು ಅವರು ಸಿದ್ಧಾಂತ ಮಾಡಿದರು. ಯಾರೂ ಲೆಕ್ಕಿಸಲಿಲ್ಲ. ನಿಜ. ಹೊರಗೋಡೆ–ಒಳಗೋಡೆ ಸಾಹಿತ್ಯವು ಸದರಿ ದೇಶ ಸಾಗುತ್ತಿರುವ ದಿಕ್ಕನ್ನೂ ಸಮಾಜದೊಳಗಿನ ಅನೂಹ್ಯ ಹೊಯ್ದಾಟಗಳನ್ನು ಸೂಚಿಸುತ್ತವೆ. ಹೀಗೆ ಬರೆಯುವ ಅವಕಾಶವೂ ಇಲ್ಲದೆ ಹೋಗಿದ್ದರೆ ಏನೆಲ್ಲ ಅನಾಹುತ ಸಂಭವಿಸುತ್ತಿತ್ತೊ?

ನನ್ನ ಪ್ರಕಾರ ಯಾವ ದೇಶದಲ್ಲಿ ಗೋಡೆಗಳು ಸ್ವಚ್ಛವಾಗಿರುವವೊ ಅಲ್ಲಿ ಕ್ರಾಂತಿಯ ಕಿಚ್ಚಿಲ್ಲ ಅಥವಾ ಕ್ರಾಂತಿಯನ್ನು ಹತ್ತಿಕ್ಕಲಾಗಿದೆ ಎಂದರ್ಥ. ಮಕ್ಕಳಿರುವ ಮನೆಯ ಗೋಡೆಗಳ ಮೇಲೆ ಮಕ್ಕಳ ಕಾಟುಕಿಚ್ಚಿಲ್ಲದಿದ್ದರೆ ಅವರ ಸೃಜನಶೀಲ ಸ್ವಾತಂತ್ರ್ಯ ಹರಣವಾಗಿರುತ್ತದೆ. ಗೋಡೆಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳುವ ವ್ಯಸನವುಳ್ಳ ದೇಶಗಳಲ್ಲೂ ಗೋಡೆಬರೆಹಗಳನ್ನು ನೋಡಿರುವೆ. ಪ್ಯಾಲೆಸ್ತೇನಿನ ಗೋಡೆ ಬರೆಹಗಳಂತೂ ಆ ದೇಶ ಹಾಯುತ್ತಿರುವ ಸಂಕಟಗಳನ್ನು ಹೇಳುತ್ತವೆ. ದೇಶ ಸುತ್ತು ಕೋಶ ಓದು ಗಾದೆಯಿದೆ. ಆದರೆ 'ದೇಶ ಸುತ್ತವಾಗ ಗೋಡೆಬರೆಹ ಓದು' ಎಂದು ಹೊಸಗಾದೆ ಕಟ್ಟಬಹುದು. ಗೋಡೆಸಾಹಿತ್ಯದಲ್ಲಿ ಸಮಾಜದೊಳಗಿನ ಅಮೃತ ವಿಷಗಳೆರಡೂ ಚೆಲ್ಲಿರುತ್ತವೆ. ಅವನ್ನು ಓದಿ ಮಿಡಿಯದೆ, ಅವುಗಳಿಂದ ಎಚ್ಚೆತ್ತುಕೊಳ್ಳದೆ ಹೋದ ಎಷ್ಟೊಂದು ಸರ್ಕಾರ ಸಮಾಜಗಳು ಚರಿತ್ರೆಯಲ್ಲಿ ದಿಕ್ಕೆಟ್ಟು ಹೋಗಿವೆ? ಗೋಡೆಬರೆಹದಂತೆ ಇರುವ ಸತ್ಯಗಳನ್ನು ಓದದೆ ಎಷ್ಟೊಂದು ಜನ ತಮ್ಮ ಬಾಳುವೆ ಕೆಡಿಸಿಕೊಂಡಿದ್ದಾರೆ?

ನನ್ನ ಕಾರಿನ ಹಿಂದಿದ್ದ ವಾಹನದವನು 'ಏನಪ್ಪಾ, ನಿದ್ದೆ ಮಾಡ್ತಿದೀಯಾ?' ಎಂಬಂತೆ ಜೋರಾಗಿ ಹಾರ್ನ್ ಮಾಡಿದ. ಕೂಡಲೇ ವಿಷಾದಯೋಗದಿಂದ ಎಚ್ಚೆತ್ತೆ. ಗಾಳೆಮ್ಮನ ಗುಡಿಯ ತೇರು ಎಳೆದಾಯಿತು ಅನಿಸುತ್ತದೆ. ಎರಡು ತಾಸಿನಿಂದ ಕಟ್ಟಿಕೊಂಡ ಟ್ರಾಫಿಕ್ ಕ್ಲಿಯರಾಗುತ್ತ, ನನ್ನ ಮುಂದಿದ್ದ ಕುರಿವಾಹಕ ವ್ಯಾನು ಕದಲಿತು. ಟಗರು ಕೊನೆಯ ಸಲವೆಂಬಂತೆ ನನ್ನತ್ತ ನೋಡಿ ನಕ್ಕಂತಾಯಿತು. ಸಂಜೆ ವಿಶ್ವವಿದ್ಯಾಲಯದಿಂದ ಮರಳಿ ಬರುವಾಗ ಗಮನಿಸಿದೆ. ಜಾತ್ರೆ ಮುಗಿದಿತ್ತು. ಅಂಗಡಿಯವರು ಟೆಂಟುಗಳನ್ನು ಕಿತ್ತಿದ್ದರು. ಖಾಲಿಬಿದ್ದ ರಸ್ತೆಯ ಮೇಲೆ ಜಾತ್ರೆಯ ಅವಶೇಷಗಳಾದ ಬಾಳೆಕಂಬ ಹೂವು ಚೆಲ್ಲಾಡಿದ್ದವು. ಅವು ಬೆಳಗ್ಗೆ ಕುರಿಯ ನೇರದಿಟ್ಟ ಮುಖಾಮುಖಿಯಿಂದ ಹುಟ್ಟಿದ ತಲ್ಲಣಗಳು ನನ್ನ ಮಸಿನ ಆಗಸವನ್ನು ಆವರಿಸಿಕೊಂಡಿರುವ ಮೋಡಗಳಂತೆ ಕಂಡವು.

**ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ**
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

**BOOK YOUR REQUIRED SPACE | SPECIAL DEAL JUST FOR YOU!**
Special Discount and Free Creative Support, Call:94486 33038




**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.1334/2023**

Between: 1.G.Marakka D/o of Late G.H. Marappa Late Rajappa, aged about 70 years, 2.Jayamma Wife of Doddasiddappa aged about 66 years, 3.Kuri Marappa, S/o late G.H Marappa, aged about 65 years, 4. Sanna Doddappa Son of late G.H Marappa aged about 60yers 5. Dodamma wife of Late Ajjappa aged about 58 years, 6. Hiriyamma wife of late Rajappa aged about 56 yers, 7. G.Doddappa son of late G.Marappa aged about 40yers, 8. Marappa son of late G.marapap aged about 38yers, 9. Halappa son of late G. Marappa aged about 34yers
All are Hindu, Agriculturist, residing at Suladahalli Village Kudligi Taluk Vijayanagara Dist
....Petitioner And
1. The Tahasildar Kudligi ., 2. Doddappa S/O G.H Marappa ......Respondent Suladahalli

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner Great grandmother by name Gollara Dodda Balamma W/o Gollara Dodda @ Ramappa was died on 19/11/1980 Suladahalli Village in Kudligi Taluk, Vijayanagra District. on the file of the civil Judge& JMFC at Kudligi, the The Tahasildar Kudligi is the respondent. The interested per Great grandmother s are hereby summoned to appear in this court in per Great grandmother or by pleader duly instructed and able to answer all material question relating to the above petition on 18/01/2024 at 11 A.M. and interested per Great grandmother sare directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge J.D) Court Kudligi

N.Narappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.1333/2023**

Between: 1.G.Marakka D/o of Late G.H. Marappa Late Rajappa, aged about 70 years,
2. Jayamma Wife of Doddasiddappa aged about 66 years, 3. Kuri Marappa, S/o late G.H Marappa, aged about 65 years, 4. Sanna Doddappa Son of late G.H Marappa aged about 60yers 5. Dodamma wife of Late Ajjappa aged about 58 years, 6. Hiriyamma wife of late Rajappa aged about 56 yers, 7. G.Doddappa son of late G.Marappa aged about 40yers, 8. Marappa son of late G.marapap aged about 38yers, 9. Halappa son of late G. Marappa aged about 34yers
All are Hindu, Agriculturist, residing at Suladahalli Village Kudligi Taluk Vijayanagara Dist ... Petitioner And 1.The Tahasildar Kudligi 2.Doddappa S/O G.H Marappa ....Respondent Suladahalli

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner Grandfather by name Gollara Dodda @ Ramappa S/o Gollara Sanna Marappa was died on 20/04/1947 Suladahalli Village in Kudligi Taluk, Vijayanagra District. on the file of the civil Judge& JMFC at Kudligi, the The Tahasildar Kudligi is the respondent. The interested per Grandfather s are hereby summoned to appear in this court in per Grandfather or by pleader duly instructedand able to answer all material question relating to the above petition on 18/01/2024 at 11 A.M. and interested per Grandfather sare directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge J.D) Court Kudligi

N.Narappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.1316/2023**

Between:
1. Smt.Gaddi Kotramma W/o of Gaddi Rudraiah, aged about 50 years,are Hindu, Agriculturist, residing at BoppalapuraVillage Kudligi Taluk Vijayanagara Dist … Petitioner
And
The Tahasildar Kudligi .....Respondent

**SUMMONS TO INTERESTED PERFATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner Father by name Basa Lingaiah S/o late Guddanayya was died on 25/08/1986 BoppalapuraVillage in Kudligi Taluk, Vijayanagra District. on the file of the civil Judge& JMFC at Kudligi, the The Tahasildar Kudligi is the respondent. The interested per Fathers are hereby summoned to appear in this court in per Father or by pleader duly instructed and able to answer all material question relating to the above petition on 16/01/2024 at 11 A.M. and interested per Father sare directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 28/12/2023

By Order of the court
Chief Ministerial officer
Civil Judge J.D) Court Kudligi

D.Gurumurthy., Durugappa.H
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.127/2023**

Between:
1.P.Sharanappa S/o of late Paradesi Obaiah, aged about 58 years, 2. P.Basappa S/o Late Paradesi Sanan Obaiah, aged about 56 years, All are Hindu, Agriculturist, residing at Suladahalli Village Kudligi Taluk Vijayanagara Dist ...Petitioner
And
The Tahasildar Kudligi .....Respondent

**SUMMONS TO INTERESTED PERFATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner Father by name Paradeshi Sanna Obaiah S/o Mallaiah was died on 15/07/2000 Suladahalli Village in Kudligi Taluk, Vijayanagra District. on the file of the civil Judge& JMFC at Kudligi, the The Tahasildar Kudligi is the respondent. The interested per Fathers are hereby summoned to appear in this court in per Father or by pleader duly instructed and able to answer all material question relating to the above petition on 16/01/2024 at 11 A.M. and interested per Father sare directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 8/01/2024

By Order of the court
Chief Ministerial officer
Civil Judge J.D) Court Kudligi

Sri.Pulikeshi
Advocate, Kudligi

ಮೈಕ್ರೋ ನ್ಯೂಸ್

## ಕೃಷಿ ಸಿಂಚಾಯಿ ಯೋಜನೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ತೋಟಗಾರಿಕೆ ಇಲಾಖೆಯಿಂದ 2023–24ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ತೋಟಗಾರಿಕೆ ಬೆಳೆ ಬೆಳೆದಿರುವ ಅಥವಾ ತೋಟಗಾರಿಕೆ ಬೆಳೆ ಬೆಳೆಯಲು ಆಸಕ್ತಿ ಹೊಂದಿರುವ ನೀರಾವರಿ ಸೌಲಭ್ಯ ಹೊಂದಿರುವ ರೈತರು ಹನಿ ನೀರಾವರಿ ಘಟಕ ಅಳವಡಿಕೆಗೆ ಮೊದಲನೇ 2 ಹೆಕ್ಟರ್ ಪ್ರದೇಶಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.75ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90ರಷ್ಟು ಸಹಾಯಧನ ಹಾಗೂ ನಂತರದ 3 ಹೆಕ್ಟರ್ ಪದ್ರೇಶಕ್ಕೆ ಎಲ್ಲಾ ವರ್ಗದ ರೈತರಿಗೆ ಶೇ.45ರಷ್ಟು ಸಹಾಯಧನ ಪಡಯಲು ಅವಕಾಶವಿರುತ್ತದೆ.

ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರು ಈಗಾಗಲೇ ಹನಿ ನೀರಾವರಿ ಘಟಕ್ಕೆ ಸಹಾಯಧನ ಪಡೆದಿದ್ದರೆ, 7 ವರ್ಷದ ನಂತರ ಪುನಃ ಸಹಾಯಧನ ಪಡೆಯಲು ಅವಕಾಶವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಿ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ವಿಜಯನಗರ ತೋಟಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರೆ: ಪೂರ್ವಭಾವಿ ಸಭೆ ಜ.16ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಶ್ರೀ ಮೈಲಾರಲಿಂಗೇಶ್ವರಸ್ವಾಮಿ ದೇವಸ್ಥಾನದ ಕಾರ್ಣಿಕೋತ್ಸವ ಫೆಬ್ರವರಿ 26ರಂದು ನಡೆಯಲಿದ್ದು, ಜಾತ್ರೆಯ ಪ್ರಯುಕ್ತ ಪೂರ್ವಭಾವಿ ಸಿದ್ಧತಾ ಸಭೆಯನ್ನು ವಿಜಯನಗರ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಜನವರಿ 16ರಂದು ಮಧ್ಯಾಹ್ನ 3 ಗಂಟೆಗೆ ದೇವಸ್ಥಾನದ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

## ಶ್ರೀ ಮಲ್ಲಿಕಾರ್ಜುನ ಸ್ವಾಮಿ ಜಾತ್ರಾ ಪೂರ್ವಭಾವಿ ಸಭೆ ಜ.16ರಂದು

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಕುರುವತ್ತಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನದ ವಾರ್ಷಿಕ ರಥೋತ್ಸವವು ಮಾರ್ಚ್ 10ರಂದು ನಡೆಯಲಿದ್ದು, ಜಾತ್ರೆಯ ಪ್ರಯುಕ್ತ ಪೂರ್ವಭಾವಿ ಸಿದ್ಧತಾ ಸಭೆಯನ್ನು ವಿಜಯನಗರ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಜ.16ರಂದು ಮಧ್ಯಾಹ್ನ 04 ಗಂಟೆಗೆ ಶ್ರೀ ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳ್ಲು ತಿಳಿಸಿದ್ದಾರೆ.

## ಪ್ರವಚನಕಾರರಾದ ಬ್ರಹ್ಮ ಕುಮಾರಿ ಶಿವಾನಿ ಫೆ.3 ರಂದು ಹೊಸಪೇಟೆಗೆ

**ಹಂಪಿ ಟೈಮ್ಸ್ ಹೊಸಪೇಟೆ**

ಅಂತರರಾಷ್ಟ್ರೀಯ ಪ್ರವಚನಕಾರರಾದ ಬ್ರಹ್ಮ ಕುಮಾರಿ ಶಿವಾನಿ ಅವರು ನಗರದ ಬಾಲಾ ಟಾಕೀಸ್ ಹಿಂಭಾಗದಲ್ಲಿರುವ ಪತ್ತಿಕೊಂಡ ಶಾಲೆಯ ಆವರಣದಲ್ಲಿ ಫೆ. 3ರಂದು ಬೆಳಿಗ್ಗೆ 6.30ರಿಂದ 8.30ರವರೆಗೆ 'ಪಾಸ್‌ವರ್ಡ್ ಫಾರ್ ಹ್ಯಾಪಿನೆಸ್' ಎಂಬ ವಿಷಯದಲ್ಲಿ ಸತ್ಸಂಗ ನಡೆಸಿಕೊಡಲಿದ್ದಾರೆ ಎಂದು ಸ್ಥಳೀಯ ಕೇಂದ್ರ ಸಂಚಾಲಕಿ ಬಿ.ಕೆ.ಮಾನಸ ಅಕ್ಕಾ ತಿಳಿಸಿದರು. ನಗರದ ಪತ್ರಿಕಾಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಆಸಕ್ತರು ಆನ್‌ಲೈನ್ ಮೂಲಕ 9141023249 ಫೋನ್‌ಗೆ ನೋಂದಾಯಿಸಬಹುದು ಅಥವಾ ನಗರದ ಬಸವಣ್ಣ ಕಾಲುವೆ ಬಳಿ ಇರುವ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಶಾಖೆಗೆ ಭೇಟಿ ನೀಡಿ ಉಚಿತ ಪಾಸ್ ಪಡೆಯಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕುಮಾರಿ ರೇವತಿ, ವೆಂಕಟೇಶ್ ಇದ್ದರು.

# ಜೀವ ರಕ್ಷಣೆಗೆ ರಸ್ತೆ ಸುರಕ್ಷತಾ ನಿಯಮಗಳ ಪಾಲನೆ ಕಡ್ಡಾಯ



**ಹಂಪಿ ಟೈಮ್ಸ್ ಬಳ್ಳಾರಿ**

ವಾಹನ ಮಾಲೀಕರು ಹಾಗೂ ಚಾಲಕರು ಕಡ್ಡಾಯವಾಗಿ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು ಎಂದು ಸಂಚಾರ ಪೊಲೀಸ್ ಅಧಿಕಾರಿ ಅಯ್ಯನಗೌಡ ಪಾಟೀಲ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ಸಂಚಾರ ಪೊಲೀಸ್ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಶ್ರೀಮೇಧಾ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ ಗುರುವಾರ ನಗರದ ಸರಳಾದೇವಿ ಕಾಲೇಜು ಆವರಣದಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಮಾತನಾಡಿದರು.

ಸರ್ಕಾರದ ಆದೇಶದಂತೆ ಪ್ರತಿವರ್ಷವೂ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸಲಾಗುತ್ತದೆ. ಒಂದು ತಿಂಗಳ ಕಾಲ ಕಾರ್ಯಕ್ರಮದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಸ್ತೆ ನಿಯಮಗಳ ಕುರಿತು ಚಾಲಕರಿಗೆ ಮತ್ತು ವಾಹನ ಮಾಲೀಕರಿಗೆ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ಅನೇಕ ಅಪಘಾತಗಳು ಮಾನವ ತಪ್ಪುಗಳಿಂದಲೇ ಆಗುತ್ತವೆ. ಅಮಾಯಕರು ಜೀವ ಕಳೆದುಕೊಂಡು ಅವಲಂಬಿಸಿರುವವರನ್ನು ಬೀದಿಪಾಲು ಮಾಡುತ್ತಾರೆ. ಚಾಲಕರು ವಾಹನದಲ್ಲಿ ಕುಳಿತ ಕೂಡಲೇ ತಮ್ಮ ಕುಟುಂಬ ಮತ್ತು ಅವಲಂಬಿತರನ್ನು ನೆನಪಿಸಿಕೊಳ್ಳಬೇಕು. ಎಲ್ಲಕಿಂತ ಜೀವ ಮುಖ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕುಡಿದು ವಾಹನ ಚಾಲನೆ ಮಾಡುವುದು, ಮೊಬೈಲ್‌ನಲ್ಲಿ ಮಾತನಾಡುತ್ತಾ ಚಾಲನೆ ಮಾಡುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕು ಎಂದು ಸೂಚಿಸಿದರು.

ಚಾಲಕರು ರಸ್ತೆ ನಿಯಮಗಳನ್ನು ಹಾಗೂ ಸಂಚಾರ ಚಿಹ್ನೆಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಸ್ವಲ್ಪವೂ ಬೇಜವಾಬ್ದಾರಿ ಅಥವಾ ನಿರ್ಲಕ್ಷ್ಯತೆ ತೋರದೆ ನಿಯಮ ಪಾಲನೆ ಮಾಡಬೇಕು. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಿರಬೇಕು. ಸಂಚಾರ ನಿಯಮಗಳನ್ನು ಪಾಲನೆ ಮಾಡಿದರೆ ಸಾಕಷ್ಟು ಅಪಘಾತಗಳನ್ನು ತಡೆಗಟ್ಟಬಹುದು ಎಂದರು.

ಬಳಿಕ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಜಾಥಾವು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಸಸಅ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಮಂಜುನಾಥ ರೆಡ್ಡಿ, ನೆಹರು ಯುವ ಕೇಂದ್ರದ ಯುವ ಅಧಿಕಾರಿ ಮೊಂಟು ಪಾತರ್ ಅವರು ಸೇರಿದಂತೆ ಸ್ಕೌಟ್ಸ್ ಮತ್ತು ಗೈಡ್ಸ್ ತಂಡ ಮತ್ತು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನೈಜ ವರದಿಗಳು ಓದುಗರನ್ನು ಆಕರ್ಷಿಸುತ್ತವೆ

### ಸಂಪಾದಕ ಚಿಂತ್ರಪಳ್ಳಿ ಶಿವಮೂರ್ತಿ ಹೇಳಿಕೆ | ಪತ್ರಿಕೋದ್ಯಮ ಮತ್ತು ಕ್ರೀಡಾ ವಿಭಾಗದಿಂದ ವಿಶೇಷ ಉಪನ್ಯಾಸ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಸ್ತುತ ಸಾಮಾಜಿಕ ಮಾಧ್ಯಮ ಎಷ್ಟೇ ಮುಂದುವರಿದಿದ್ದರೂ ಮುದ್ರಣ ಮಾಧ್ಯಮ ಸವಾಲಾಗಿ ಎದುರಿಸುತ್ತದೆ ಎಂದು ಸಂಪಾದಕ ಚಿಂತ್ರಪಳ್ಳಿ ಶಿವಮೂರ್ತಿ ತಿಳಿಸಿದರು.

ನಗರದ ಶ್ರೀ ಶಂಕರ್ ಆನಂದ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಅಡಿಯಲ್ಲಿ ಪತ್ರಿಕೋದ್ಯಮ ವಿಭಾಗ ಮತ್ತು ಕ್ರೀಡಾ ವಿಭಾಗದಿಂದ ವಿಶೇಷ ಉಪನ್ಯಾಸ ಉದ್ಘಾಟಿಸಿ ಮಾತನಾಡಿದರು.

ಪತ್ರಿಕೆಗಳು ಹೇಗಿರಬೇಕು ಎಂಬುದನ್ನು ಲಂಕೇಶ್ ಪತ್ರಿಕೆ ತೋರಿಸಿಕೊಟ್ಟಿದೆ. ಪತ್ರಕರ್ತನಿಗೆ ಸಮಾಜಿಕ ಜವಾಬ್ದಾರಿ, ಕಾಳಜಿ ಇರಬೇಕು. ವಿದ್ಯುನ್ಮಾನ ಮಾಧ್ಯಮ ಪೈಪೋಟಿ ನಡುವೆಯು ಪತ್ರಿಕೆಗಳ ಮುದ್ರಣ ಹೆಚ್ಚಳಗೊಂಡಿವೆ ಎಂದರು. ಪತ್ರಿಕೆಗಳಿಗೆ ತನದೇ ಆದ ನಿಲುವು ಇರುತ್ತದೆ. ಪತ್ರಕರ್ತರು ನಿಷ್ಪಕ್ಷಪಾತವಾಗಿ ಮತ್ತು ನಿಖರವಾಗಿ ಸುದ್ದಿ ಮಾಡಬೇಕು. ಸಮಾಜ ಬದಲಾಯಿಸುವ ಶಕ್ತಿ ಪತ್ರಕರ್ತರಿಗಿದೆ. ಅನ್ಯಾಯ, ಅಕ್ರಮ, ಅತ್ಯಾಚಾರ, ಭ್ರಷ್ಟಾಚಾರ ವಿರುದ್ಧ ಸುದ್ದಿ ಮಾಡಿ ಸರ್ಕಾರ ಗಮನ ಸೆಳೆಯಬೇಕು. ಕೆಟ್ಟಸುದ್ದಿ ಕಾಳ್ಗಿಚ್ಚನಂತೆ ಹರಡುತ್ತದೆ. ಒಳ್ಳೆಯ ಸುದ್ದಿ ಹರಡುವುದಿಲ್ಲ ಎಂದರು. ಸುಳ್ಳುಸುದ್ದಿ ಮಾಡಬಾರದು. ನೈಜಾಂಶ ಸುದ್ದಿ ಮಾತ್ರ ಮಾಡಬೇಕು ಎಂದು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಿವೃತ್ತ ಪ್ರಾಂಶುಪಾಲರಾದ ಚಂದ್ರಮೌಳಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಸ್ತು ಬಹಳ ಮುಖ್ಯ. ಶಿಕ್ಷಣ ಯಾರು ಕದಿಯಲಾರದ ವಸ್ತು. ಶಿಕ್ಷಣ ಪಡೆಯಲಿಕ್ಕೆ ಕೆಲವು ಸಮಯ ಹಿಡಿಯುತ್ತದೆ. ದೇಶದ ಆಸ್ತಿ ಶಿಕ್ಷಣ, ಗುಣಾತ್ಮಕ ಶಿಕ್ಷಣ ಪಡೆಯಬೇಕು. ಉನ್ನತ ಶಿಕ್ಷಣ ಪಡೆದು ವಿದ್ಯಾವಂತರಾಗಿ ಎಂದರು.



ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಬಿ.ಕೆ ಮುರಳೀಧರ ಅಧ್ಯಕ್ಷತೆವಹಿಸಿ ಮಾತನಾಡಿ, ಇಂದಿನ ದಿನಗಳಲ್ಲಿ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವು ಮುಖ್ಯ ಮತ್ತು ಸುಲಭವಾಗಿ ಪ್ರತಿದಿನವೂ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ನಮ್ಮ ಆರೋಗ್ಯವು ಸುಸ್ತಿತಿಯಲ್ಲಿರುತ್ತದೆ ಎಂದು ಕರೆಕೊಟ್ಟರು

ಐಕ್ಯೂಎಸಿ ಸಂಚಾಲಕ ಡಾ:ಗುರುರಾಜ ಅವರಾದಿ ಸ್ವಾಗತಿಸಿದರು. ಪತ್ರಿಕೋದ್ಯಮ ವಿದ್ಯಾರ್ಥಿಗಳಾದ ತೇಜಸ್ವಿನಿ ನಿರೂಪಿಸಿದರು. ನಾರಾಯಣಮೂರ್ತಿ ವಂದಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಭೌತಶಾ ಸ್ತ್ರ ವಿಭಾಗದ ಮುಖ್ಯಸ್ಥ ದಾರುಕಸ್ವಾಮಿ, ಇತಿಹಾಸ ವಿಭಾಗದ ಹುಲುಗಪ್ಪ, ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕ ಸುಂಕಣ್ಣ.ಟಿ, ಕ್ರೀಡಾ ವಿಭಾಗದ ಸೋಮಶೇಖರ್, ಪರಿಸರ ಅಧ್ಯಯನ ವಿಭಾಗದ ಅಮೃತ್ ನಾಯಕ ಇದ್ದರು.

# ಕ.ರಾ.ಸ.ನೌ ಸಂಘದಿಂದ ಬೇಡಿಕೆ

### 7ನೇ ವೇತನ ಆಯೋಗದ ಜಾರಿ ಮತ್ತು ಎನ್‌ಪಿಎಸ್ ರದ್ದತಿ ಹಕ್ಕೊತ್ತಾಯ

**ಹಂಪಿ ಟೈಮ್ಸ್ ಕೊಟ್ಟೂರು**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಜಾರಿ ಮತ್ತು ಎನ್‌ಪಿಎಸ್ ರದ್ದತಿ ಹಾಗೂ ನಗದು ರಹಿತ ಚಿಕಿತ್ಸೆಗೆ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೊಳಿಸಲು, ಸರ್ಕಾರಕ್ಕೆ ಸೂಚಿಸುವಂತೆ, ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ಅವರಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೊಟ್ಟೂರು ಘಟಕದಿಂದ ಮನವಿ ಪತ್ರ ಸಲ್ಲಿಕೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ರಾಜ್ಯ ಘಟಕ ಸೂಚನೆ ಮೇರೆಗೆ ಶನಿವಾರ ಕ.ರಾ. ಸ.ನೌ ಸಂಘ ಕೊಟ್ಟೂರು ಘಟಕ ಕ್ಷೇತ್ರದ ಶಾಸಕರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು.

ರಾಜ್ಯದ 31 ಜಿಲ್ಲೆಗಳು ಮತ್ತು 183 ತಾಲೂಕುಗಳಲ್ಲಿ ಕ.ರಾ.ಸ.ನೌ ಸಂಘ ಶಾಖೆಗಳನ್ನು ಹೊಂದಿದ್ದು ,6 ಲಕ್ಷ ರಾಜ್ಯದ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಬೃಹತ್ ಸಂಘಟನೆ ಆಗಿದ್ದು, ಸಂಘವು ರಾಷ್ಟ್ರ ಮತ್ತು ರಾಜ್ಯದಲ್ಲಿ ಸಂಭವಿಸುವ ಪ್ರಕೃತಿ ವಿಕೋಪ,ಉತ್ತರ ಕರ್ನಾಟಕ ಪ್ರವಾಹ ಹಾಗೂ ಕೋವೀಡ್ ಸಂಕಷ್ಟದಲ್ಲಿ ಸರ್ಕಾರಕ್ಕೆ ಆರ್ಥಿಕ ನೆರವು ನೀಡಿದ ಹೆಮ್ಮೆಯ ಸಂಘಟನೆ.



ರಾಜ್ಯದಲ್ಲಿ 2.5 ಲಕ್ಷ ಹುದ್ದೆಗಳು ಖಾಲಿ ಇದ್ದರು ಜನ ಸಾಮಾನ್ಯರ ಕಲ್ಯಾಣ ಮತ್ತು ರಾಜ್ಯದ ಅಭಿವೃದ್ಧಿಗೆ ಸರ್ಕಾರ ಜಾರಿಗೊಳಿಸಿದ ಯೋಜನೆಗಳನ್ನು ಶ್ರೀಸಾಮಾನ್ಯರಿಗೆ ತಲುಪಿಸುವಲ್ಲಿ ಮತ್ತು ರಾಜ್ಯದ ಅಭಿವೃದ್ಧಿ ಸೂಚ್ಯಂಕ ಬೆಳವಣಿಗೆಯಲ್ಲಿ ಸರ್ಕಾರಿ ನೌಕರರ ಪಾತ್ರ ಬಹು ಮುಖ್ಯವಾಗಿದೆ.

ಕ್ಷೇತ್ರದಲ್ಲಿ ತಾವು ನೀಡುವ ಸೂಚನೆ ಮತ್ತು ಸರ್ಕಾರಿ ಕೆಲಸಗಳನ್ನು ಕ್ಷೇತ್ರದ ಶ್ರೀಸಾಮಾನ್ಯರಿಗೆ ತಲುಪಿಸುವಲ್ಲಿ ಮತ್ತು ಅಭಿವೃದ್ಧಿಗೆ ಕಾರ್ಯಗಳಲ್ಲಿ ತಾವು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡುವೆವು ಎಂದು ತಿಳಿಸಿ, ತಮ್ಮ ಬೇಡಿಕೆ ಈಡೇರಿಯಲು ಸಹಕಾರ ಮತ್ತು ಬೆಂಬಲ ನೀಡಬೇಕೆಂದು ಹಕ್ಕೊತ್ತಾಯಿಸಿದ್ದಾರೆ. ಮನವಿ ಪತ್ರ ಕೊಡುವ ವೇಳೆ ಕೊಟ್ಟೂರು ಘಟಕದ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.

# ಯುವ ಪರಿವರ್ತಕರ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಯುವ ಸ್ಪಂದನ ಕಾರ್ಯಕ್ರಮದಡಿಯಲ್ಲಿ ಹೊಸದಾಗಿ ಯುವ ಸಮಾಲೋಚಕರು ಹಾಗೂ ಯುವ ಪರಿವರ್ತಕರ ತರಬೇತಿಗೆ ಆಯ್ಕೆ ಮಾಡಲು ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಯುವ ಪರಿವರ್ತಕರ ಹುದ್ದೆಗೆ ಹೊಸಪೇಟೆ, ಕೊಟ್ಟೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ ತಾಲ್ಲೂಕುಗಳಲ್ಲಿ ಖಾಲಿಯಿರುವ 06 ಹುದ್ದೆಗೆಯುವ ಪರಿವರ್ತಕರನ್ನು ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಬೆಂಗಳೂರು ಇಲ್ಲಿ ತರಬೇತಿ ಪಡೆದು ಆಯ್ಕೆಯಾದ ನಂತರ ಯುವ ಪರಿವರ್ತಕ ಹಾಗೂ ಯುವ ಸಮಾಲೋಚಕರೆಂದು ಪ್ರಮಾಣೀಕರಿಸಲಾಗುತ್ತದೆ.

ಪದವಿ ಹಾಗೂ ಮೇಲ್ಪಟ್ಟು (ದೈಹಿಕ ಶಿಕ್ಷಣ/ ಸಮಾಜಿಕಕಾರ್ಯ) ಪದವಿ ತೇರ್ಗಡೆ ಹೊಂದಿದವರಿಗೆಆದ್ಯತೆ ನೀಡಲಾಗುವುದು. ಸಮುದಾಯದಲ್ಲಿ ಕೆಲಸ ಮಾಡಿರುವವರಅನುಭವಅಪೇಕ್ಷಿಸಲಾಗಿದೆ. ಸಾರ್ವಜನಿಕರ ಮಾನಸಿಕ ಆರೋಗ್ಯ ಸಂವರ್ಧನ ಸೇವೆಗಳ ಬಗ್ಗೆ ಸಮುದಾಯದಲ್ಲಿ ಕೆಲಸ ಮಾಡಲು ಆಸಕ್ತಿ ಹಾಗೂ ಹುಮ್ಮಸ್ಸು ಹೊಂದಿರಬೇಕು. ಕನ್ನಡವನ್ನು ಸ್ವಚ್ಛವಾಗಿ ಮಾತನಾಡುವುದುಅವಶ್ಯಕ. ಪರಸ್ಪರ ಭಾಂದವ್ಯಾಭಿವೃದ್ಧಿಯಕೌಶಲ್ಯ, ತರಬೇತಿ ನೀಡುವಕೌಶಲ್ಯ, ಸಂವಹನ ಮತ್ತುಉಲ್ಲೇಖ ಸೇವೆಗಳಿಗೆ ಸಂಘ ಸಂಸ್ಥೆಗಳ ಜೊತೆ ಸಹಯೋಗಏರ್ಪಡಿಸುವ ಕೌಶಲ್ಯಗಳು ಇರಬೇಕು. ಕನಿಷ್ಠ ವಯೋಮಿತಿ 21 ರಿಂದ 35 ವರ್ಷಗಳು, ಗೌರವಧನ ಮತ್ತುಅವಧಿ ಪ್ರಮಾಣಿಕೃತ ಅಭ್ಯರ್ಥಿಗಳಿಗೆ ತಿಂಗಳಿಗೆ ಗೌರವಧನ ಹಾಗೂ ಪ್ರವಾಸ ಭತ್ಯೆಆರು ತಿಂಗಳ ಕಾಲ ನೀಡಲಾಗುವುದು.

ವಿಜಯನಗರಜಿಲ್ಲೆಗೆ ಖಾಲಿಯಿರುವ 01 ಹುದ್ದೆಗೆಯುವ ಪರಿವರ್ತಕರನ್ನುತರಬೇತಿಗೆ ಆಯ್ಕೆ ಮಾಡಲಾಗುತ್ತಿದ್ದು, ಪದವಿ ಹಾಗೂ ಎಂ.ಎಸ್.ಡಬ್ಲ್ಯೂದೈಹಿಕ ಶಿಕ್ಷಣ/ ಸಮಾಜಿಕಕಾರ್ಯ (ಕಥಿಟಿಭಿಟಟಅಥಿ/ಖಂಭಿಚಿಟ ತಿಔಡಿಇ) ಪದವಿ ತೇರ್ಗಡೆ ಹೊಂದಿದವರಿಗೆಆದ್ಯತೆ ನೀಡಲಾಗುವುದು. ಸಮುದಾಯದಲ್ಲಿ ಕೆಲಸ ಮಾಡಿರುವವರಅನುಭವಅಪೇಕ್ಷಿಸಲಾಗಿದೆ. ಆಪ್ತ ಸಮಾಲೋಚನೆಯನ್ನುಒದಗಿಸುವಕೌಶಲ್ಯವನ್ನು ಹೊಂದಿರಬೇಕು. ಸಾರ್ವಜನಿಕರ ಮಾನಸಿಕ ಆರೋಗ್ಯ ಸಂವರ್ಧನ ಸೇವೆಗಳ ಬಗ್ಗೆ ಸಮುದಾಯದಲ್ಲಿ ಕೆಲಸ ಮಾಡಲು ಆಸಕ್ತಿ ಹಾಗೂ ಹುಮ್ಮಸ್ಸು ಹೊಂದಿರಬೇಕು. ಕನ್ನಡವನ್ನು ಸ್ವಚ್ಛವಾಗಿ ಮಾತನಾಡುವುದುಅವಶ್ಯಕ. ಪರಸ್ಪರ ಭಾಂದವ್ಯಾಭಿವೃದ್ಧಿಯಕೌಶಲ್ಯ, ತರಬೇತಿ ನೀಡುವಕೌಶಲ್ಯ, ಸಂವಹನ ಮತ್ತುಉಲ್ಲೇಖ ಸೇವೆಗಳಿಗೆ ಸಂಘ ಸಂಸ್ಥೆಗಳ ಜೊತೆ ಸಹಯೋಗಏರ್ಪಡಿಸುವ ಕೌಶಲ್ಯಗಳು ಇರಬೇಕು. ಕನಿಷ್ಠ ವಯೋಮಿತಿ 21 ರಿಂದ 35 ವರ್ಷಗಳು. ಗೌರವಧನ ಮತ್ತುಅವಧಿ ಪ್ರಮಾಣೀಕೃತ ಅಭ್ಯರ್ಥಿಗಳಿಗೆ ತಿಂಗಳಿಗೆ ಗೌರವಧನ ಹಾಗೂ ಪ್ರವಾಸ ಭತ್ಯೆಆರು ತಿಂಗಳ ಕಾಲ ನೀಡಲಾಗುವುದು.

ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಸಂಪೂರ್ಣ ವಿಳಾಸ, ವಯಸ್ಸು, ವಾಸಿಸುತ್ತಿರುವ ವಿಳಾಸ, ವೈಯಕ್ತಿಕ ಮಾಹಿತಿ(ರೆಜೂಮ್) ಯೊಂದಿಗೆಜನವರಿ 16ರೊಳಗೆ ಕ್ರೀಡಾಸಂಕಿರಣ, ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ ಹೊಸಪೇಟೆ, ವಿಜಯನಗರಜಿಲ್ಲೆ, ಈ ಕಚೇರಿಯಲ್ಲಿಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆಗೆ ಕಚೇರಿಅವಧಿಯಲ್ಲಿ ಭೇಟಿ ನೀಡಿ, ಮಾಹಿತಿ ಪಡೆಯಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಕಲಿಕೆಗೆ ಆಸಕ್ತಿ ಮೂಡಿಸಿ

### ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**



ಮಕ್ಕಳಲ್ಲಿ ಕಲಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸುವುದರ ಜೊತೆಗೆ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಿ ಭವಿಷ್ಯದ ಬದುಕು ಕಟ್ಟಿಕೊಳ್ಳುವಂತೆ ರೂಪಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ನಿರ್ಮಾಣ ಸಂಸ್ಥೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಎಸ್‌ಎಸ್‌ಎಲ್‌ಸಿ ನಂತರ ಮುಂದೇನು? ಎಂಬ ವಿಷಯದ ಕುರಿತು ಜಿಲ್ಲಾ ಪಂಚಾಯತ್ ನಜೀರ್‌ಸಾಬ್ ಸಭಾಂಗಣದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಗುರುವಾರ ಹಮ್ಮಿಕೊಂಡಿದ್ದ ವೃತ್ತಿಯಾಧಾರಿತ ವಿವಿಧ ಕೋರ್ಸ್‌ಗಳ ಬಗ್ಗೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಹಂತದಲ್ಲಿ ಮಕ್ಕಳನ್ನು ಮುನ್ನಲೆಗೆ ತರಲು ಈ ತರಬೇತಿ ಬಹಳ ಸದುಪಯೋಗ ಆಗಲಿದೆ. 165 ಅಧಿಕಾರಿಗಳು ತರಬೇತಿ ಪಡೆದ ನಂತರ ನಿಯೋಜಿಸಿದ ಶಾಲೆಗಳಿಗೆ ಜ.17 ರಿಂದ 20 ರೊಳಗಾಗಿ ಭೇಟಿ ನೀಡಿ ಮಕ್ಕಳಿಗೂ ತರಬೇತಿ ನೀಡಿ ವರದಿ ಸಲ್ಲಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಗ್ರಾಮೀಣ ಭಾಗದ ಹಲವು ಮಕ್ಕಳಿಗೆ ಕೆಲವು ವಿಷಯಗಳ ಬಗ್ಗೆ ಮಾತ್ರ ಮಾಹಿತಿ ಇರುತ್ತವೆ. ಹಲವು ಕೋರ್ಸ್ ಮತ್ತು ವೃತ್ತಿಗಳ ಬಗ್ಗೆ ಮಾಹಿತಿ ನೀಡಲು ಈ ತರಬೇತಿ ಸಹಕಾರಿಯಾಗಲಿದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಹಲವು ವಿಷಯ ಮತ್ತು ವೃತ್ತಿಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುವುದರ ಮೂಲಕ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಬೇಕು. ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಯಾಗುವುದೆಂಬ ಆಶಯದ ನುಡಿ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಉಮಾದೇವಿ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಯಟ್‌ನ ಹಿರಿಯ ಮತ್ತು ಕಿರಿಯ ಉಪನ್ಯಾಸಕರು, ಕ್ಷೇತ್ರ ಸಮನ್ವಯಾಧಿಕಾರಿಗಳು, ಪ್ರೌಢಶಾಲೆಗಳ ಮುಖ್ಯಗುರುಗಳು, ಇ.ಸಿ.ಓ, ಬಿ.ಆರ್.ಪಿ.ಸಿ.ಆರ್.ಪಿ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಿದಿರಿನ ಕೃಷಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 2023–24 ಸಾಲಿನಲ್ಲಿ "ಕಲ್ಟಿವೇಷನ್ ಆಫ್ ಬಂಬೂ" ಕಾರ್ಯಕ್ರಮದಡಿ ಬಿದಿರಿನ ಕೃಷಿ ಮಾಡಲು ಸಹಾಯಧನಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಸಂಕಿನದಾಸ ಅವರು ತಿಳಿಸಿದ್ದಾರೆ. ಜಿಲ್ಲೆಗೆ 53 ಎಕರೆ ಭೂಮಿ ಭೌತಿಕವಾಗಿ ನಿಗದಿಪಡಿಸಲಾಗಿದ್ದು, ಪರಿಶಿಷ್ಟ ಜನಂಗದ ಫಲಾನುಭವಿಗಳ ಜಮೀನಿನಲ್ಲಿ ಬಿದಿರನ್ನು ಬೆಳೆಸಿ ಪೋಷಿಸುವ ಬಗ್ಗೆ ಮೂರು ವರ್ಷಗಳ ಅವಧಿಗೆ ರೂ.60 ಸಾವಿರ ಧರ ನಿಗದಿ ಪಡಿಸಲಾಗಿದ್ದು, ಶೇ.90ರಷ್ಟು ಭಾಗ ರೂ.54 ಸಾವಿರ ಹಾಗು ಶೇ.10 ಭಾಗ ರೂ.6000 ಗಳನ್ನು ನಿಗದಿಪಡಿಸಲಾಗಿದೆ, ಪರಿಶಿಷ್ಟ ವರ್ಗದ ಅರ್ಹ ಫಲಾನುಭವಿಗಳು ಅರ್ಜಿಗಳನ್ನು ಆಯಾ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿಯಲ್ಲಿ ಪಡೆದು, ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಆಯಾ ತಾಲ್ಲೂಕು ಕಚೇರಿಗಳಿಗೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA